"ನೈಜ ಘಟನೆಗಳ ಆಧಾರಿತ ವ್ಯಕ್ತಿತ್ವ ವಿಕಸನದ ಕೃತಿ"



ಬದುಕು ಬದಲಾಯಿಸಿದ ಕಥನಗಳು

NIRUTA Publications

◆ ಶೇಖರ್ ಗಣಗಲೂರು

ಬದುಕು ಬದಲಾಯಿಸಿದ ಕಥನಗಳು

"ನೈಜ ಘಟನೆಗಳ ಆಧಾರಿತ ವ್ಯಕ್ತಿತ್ವ ವಿಕಸನದ ಕೃತಿ"

ಶೇಖರ್ ಗಣಗಲೂರು

ನಿರುತ
ಪಬ್ಲಿಕೇಷನ್ಸ್

Baduku Badalayisida Kathanagalu

A Personality Development Stories based upon true life experiences

by **Shekhar Ganagaluru**

ಈ ಪ್ರಕಟಣೆಯನ್ನು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ನಕಲು ಮಾಡಲು, ಮರುಮುದ್ರಿಸಲು, ಮತ್ತೆ ಬಳಸಲು ಸಾಧ್ಯವಾಗುವಂತೆ ಸಂಗ್ರಹಿಸಿಕೊಳ್ಳಲು ಹಾಗೂ ಎಲೆಕ್ಟ್ರಾನಿಕ್, ಮೆಕಾನಿಕಲ್, ಫೋಟೋಕಾಪಿ, ರೆಕಾರ್ಡಿಂಗ್ ಅಥವಾ ಇನ್ನಿತರ ಯಾವುದೇ ರೀತಿಗೆ ಬದಲಾಯಿಸಲು ಕೃತಿ ಸ್ವಾಮ್ಯ ಹೊಂದಿರುವವರ ಲಿಖಿತ ಒಪ್ಪಿಗೆ ಅತ್ಯವಶ್ಯ.

ISBN	: 978-93-84262-53-2
First Edition	: November 2018
Second Edition	: January 2019
Size	: 1/8 Demmy
Price	: Rs.160/-
Copies	: 2000
Paper	: N.S. Maplitho 80 GSM
Pages	: 151
Rights	: Author
ಪ್ರಥಮ ಮುದ್ರಣ	: ನವೆಂಬರ್ ೨೦೧೮
ದ್ವಿತೀಯ ಮುದ್ರಣ	: ಜನವರಿ ೨೦೧೯
ಆಕಾರ	: ೧/೮ ಡೆಮಿ
ಪುಟಗಳು	: ೧೫೧
ಕಾಗದ	: ಎನ್.ಎಸ್. ಮ್ಯಾಪ್ಲಿತೊ ೮೦ ಜಿ.ಎಸ್.ಎಂ.
ಹಕ್ಕುಗಳು	: ಲೇಖಕರದ್ದು
ಬೆಲೆ	: ರೂ.೧೬೦/–
ಮುಖಪುಟ ವಿನ್ಯಾಸ	: ಹಾದಿಮನಿ

ಪ್ರಕಾಶಕರು ಮತ್ತು ಮುದ್ರಕರು:

ನಿರುತ ಪಬ್ಲಿಕೇಷನ್ಸ್, ನಂ. 326, 1ನೇ ಮಹಡಿ, ಸಿಂಡಿಕೇಟ್ ಬ್ಯಾಂಕ್ ಎದುರು, ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ, ಬೆಂಗಳೂರು–560056.
ದೂ: 080–23213710, ಮೊ: 9980066890

Email: ramesha.mh@gmail.com, nirutapublications@gmail.com

Websites: www.socialworkfootprints.org, www.niratanka.org

ಹಳ್ಳಿಗಾಡಿನ ನನ್ನನ್ನು ಗುರುತಿಸಿ, ಅವಕಾಶ ನೀಡಿ, ವೃತ್ತಿಜೀವನಕ್ಕೆ
ಭದ್ರಬುನಾದಿ ಹಾಕಿದ...

ಔಮ ಇಂಡಿಯಾ ಪ್ರೈ. ಲಿ.,

ನನ್ನಲ್ಲಿನ ಸಾಮರ್ಥ್ಯವನ್ನು ಗುರುತಿಸಿ, ಕೌಶಲ್ಯಗಳನ್ನು ಬೆಳೆಸಿ ಮುನ್ನಡೆಸಿದ...

ಲಿಂಕನ್ ಹೆಲಿಯೋಸ್ ಇಂಡಿಯಾ ಲಿ.,

ಮತ್ತು

ಚೈತನ್ಯಗೊಳಿಸುವ ಅವಕಾಶಗಳನ್ನು ನೀಡುತ್ತಾ, ವೃತ್ತಿಯಲ್ಲಿನ ಆನಂದವನ್ನು
ಆಸ್ವಾದಿಸಲು ಆಧಾರಸ್ತಂಭವಾಗಿರುವ...

ಬಿಯೆಸ್ಸೆ ಮ್ಯಾನುಫ್ಯಾಕ್ಚರಿಂಗ್ ಕಂ. ಪ್ರೈ. ಲಿ.,

ಸಂಸ್ಥೆಗಳಿಗೆ

ಈ ನನ್ನ ಚೊಚ್ಚಲ ಕೃತಿಯನ್ನು ಹೃತ್ಪೂರ್ವಕವಾಗಿ ಅರ್ಪಿಸುತ್ತಾ,
ಜೀವನಪರ್ಯಂತ ಈ ಸಂಸ್ಥೆಗಳಿಗೆ ಚಿರಋಣಿಯಾಗಿರುತ್ತೇನೆ.

ಈ ಕೃತಿಯನ್ನು

ದ್ವಿತೀಯ

ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ

ಸಮ್ಮೇಳನ – 2018 ರಲ್ಲಿ

ಬಿಡುಗಡೆ ಮಾಡಲು ಅವಕಾಶ ನೀಡಿದ ಸಮ್ಮೇಳನದ ಮಾರ್ಗದರ್ಶಕರಿಗೆ,

ಆಯೋಜಕರಿಗೆ ಮತ್ತು ಬೆಂಬಲಿಗರಿಗೆ

ನನ್ನ ಕೃತಜ್ಞತೆಗಳು

ಮುನ್ನುಡಿ

ನಮ್ಮ ಪ್ರೀತಿಯ ಹುಡುಗ ಶೇಖರ್ ತಮ್ಮೆಲ್ಲಾ ಕೆಲಸ ಕಾರ್ಯಗಳ ಒತ್ತಡಗಳ ಮಧ್ಯೆ ಸಮಯ ಹೊಂದಿಸಿಕೊಂಡು ಈ ಹೊತ್ತಿಗೆ **“ಬದುಕು ಬದಲಾಯಿಸಿದ ಕಥನಗಳು”** ಹೊರತಂದಿರುವುದು ಬಹಳ ಹೆಮ್ಮೆಯ ವಿಚಾರ.

ನನ್ನ ಹಾಗೂ ಶೇಖರ್‌ರ ಒಡನಾಟದ ಈ 8–10 ವರ್ಷಗಳಲ್ಲಿ ನಾನು ಕಂಡಿದ್ದು ಅವರ ಎರಡು ವಿಭಿನ್ನ ಆದರೆ ಸಹಜ ಪೂರಕ ವ್ಯಕ್ತಿತ್ವಗಳು. ಅವರ ಬಾಹ್ಯ ವ್ಯಕ್ತಿತ್ವ ಕಾರ್ಯನಿಷ್ಠೆ ಮತ್ತು ಕುಶಲತೆಯನ್ನು ವ್ಯಕ್ತಪಡಿಸಿದರೆ, ಆಂತರ್ಯದ ವ್ಯಕ್ತಿತ್ವ ಸೃಜನಶೀಲತೆ ಮತ್ತು ಸಂವೇದನಾಶೀಲತೆಯನ್ನು ತೋರುವಂತಹುದಾಗಿದೆ.

ಬಾಲ್ಯಾವಸ್ಥೆಯಲ್ಲಿ ಹಳ್ಳಿಯ ವಾತಾವರಣದಲ್ಲಿ, ಸಗಣಿ ಸಾರಿಸಿದ ನೆಲದಲ್ಲಿ, ಹೊಲ, ಪ್ರಾಣಿ, ಪಕ್ಷಿಗಳ ಮಧ್ಯದಲ್ಲಿ ರೂಪುಗೊಂಡ ವ್ಯಕ್ತಿತ್ವ ಮುಂದೆ ಬೆಂಗಳೂರು ನಗರ ಕೊಡುವ ಐಷಾರಾಮದ ಸಕಲ ಆಧುನಿಕ ಸೌಕರ್ಯಗಳ ಬದುಕಿಗೆ ಮಾರ್ಪಾಡಾಗಿರುವ ನೈಜತೆಯನ್ನು ಈ ಹೊತ್ತಿಗೆಯಲ್ಲಿ ಅವರಿಗೆ ಪ್ರದತ್ತವಾದ ಆಡುಭಾಷೆಯ ಸಹಜ ಶೈಲಿಯಲ್ಲಿ ಬಹಳ ಸೊಗಸಾಗಿ ಚಿತ್ರಿಸಿದ್ದಾರೆ.

ಇಂತಹ ಮಹಾ ಮಾರ್ಪಾಡಿನ ಪ್ರಕ್ರಿಯೆಯಲ್ಲಿ ಶೇಖರ್ ತಮಗೆ ಚಿಕ್ಕಂದಿನಲ್ಲಿ ತಂದೆ ತಾಯಿಯರು, ಗುರುಗಳು ಹಾಗೂ ಹಿರಿಯರು ಹಾಕಿಕೊಟ್ಟ ಭದ್ರ ಬುನಾದಿ ಯಾವ ರೀತಿಯಲ್ಲಿ ಈ ಮಟ್ಟ ತಲುಪಲು ಸಾಧ್ಯವಾಯಿತು ಅನ್ನುವುದನ್ನು ಮನಮುಟ್ಟುವಂತೆ ವಿವರಿಸಿದ್ದಾರೆ.

ಶೇಖರ್ ತಮ್ಮ ಈ ಮಾರ್ಪಾಡಿನ ಪ್ರಕ್ರಿಯೆಯ ಪ್ರತಿ ಮಜಲಿನಲ್ಲೂ ಎದುರಿಸಿದ ದ್ವಂದ್ವ ಬಹುಶಃ ನಾವೆಲ್ಲರೂ ಯಾವುದೋ ಒಂದು ಘಟ್ಟದಲ್ಲಿ ಅನುಭವಿಸಿರುವ ದಿನಗಳನ್ನು ನಮಗೆ ನೆನಪಿಸಿಕೊಳ್ಳುವಂತೆ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ.

ಜೊತೆಗೆ ಅವರ ಅಂತಃಕರಣದ ನುಡಿಗಳು ನಮಗರಿವಿಲ್ಲದಂತೆ ಅವರೆಡೆಗೆ ನಮ್ಮನ್ನು ಸೆಳೆದುಬಿಡುತ್ತದೆ. ನಮ್ಮ ಒಳಗಿನ ವ್ಯಕ್ತಿತ್ವದ ಆತ್ಮವಿಶ್ವಾಸ ಮತ್ತು ನಮ್ಮ ಬಾಹ್ಯ ವ್ಯಕ್ತಿತ್ವದ ಆತ್ಮವಿಶ್ವಾಸದ ಕೊರತೆ (inferiority complex) ನಡುವಿನ ದ್ವಂದ್ವ ಯುದ್ಧದ ಫಲಿತಾಂಶದ ಮೇಲೆ ನಮ್ಮ ವೈಯಕ್ತಿಕ ಬೆಳವಣಿಗೆ ನಿಂತಿದೆ ಎನ್ನುವುದನ್ನು ಹಲವಾರು ನೈಜ ನಿದರ್ಶನಗಳ ಮೂಲಕ ಬಹಳ ಪರಿಣಾಮಕಾರಿಯಾಗಿ ಮನತಟ್ಟುವಂತೆ ಶೇಖರ್ ಚಿತ್ರಿಸಿದ್ದಾರೆ.

ಶೇಖರ್ ಎಂಬ ಗಿಡ, ಇಂದು ಒಂದು ವೃಕ್ಷವಾಗಿ ಬೆಳೆಯಲು ಕಾರಣರಾದ ಅವರ ತಂದೆ, ತಾಯಿ, ಕಾಂತಮ್ಮ ಟೀಚರ್, ಗುರು ರಾಘವನಾಥ್, ಸಹೋದ್ಯೋಗಿಗಳು, ಮಡದಿ ಹಾಗೂ ಮಗಳನ್ನು ಬಹಳ ಆತ್ಮೀಯತೆಯಿಂದ ಬೇರೆ ಬೇರೆ ದೃಷ್ಟಾಂತಗಳ ಮೂಲಕ ಸ್ಮರಿಸಿಕೊಂಡಿದ್ದಾರೆ.

ಶೇಖರ್ ಅವರ ಬರವಣಿಗೆಯ ಶೈಲಿ ಅತ್ಯಾಕರ್ಷಕ. ಬರವಣಿಗೆಯ ಬದುಕು ಅವರನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯುವ ಎಲ್ಲಾ ಸೂಚನೆಗಳನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ. ಇಂಗ್ಲಿಷ್‌ಮಯವಾಗಿರುವ ಬೆಂಗಳೂರಿನ ಇಂದಿನ ಒತ್ತಡದ ಜೀವನದಲ್ಲಿ ಶೇಖರ್‌ರ ಈ ಕನ್ನಡದ ಕೃತಿಯ ತಂಗಾಳಿಯ ತಂಪು ಹಾಗೂ ಕೋಗಿಲೆಯ ಇಂಪನ್ನು ನಾವು ನೀವೆಲ್ಲಾ ಆಸ್ವಾದಿಸುತ್ತಾ ಅವರನ್ನು ಕನ್ನಡ ಸಾರಸ್ವತ ಲೋಕಕ್ಕೆ ತುಂಬುಹೃದಯದಿಂದ ಸ್ವಾಗತಿಸೋಣ.

ಬಿ.ಸಿ. ಪ್ರಭಾಕರ್
ಅಧ್ಯಕ್ಷರು – ಕರ್ನಾಟಕ ಮಾಲೀಕರ ಸಂಘ
ಮತ್ತು ವಕೀಲರು – ಬಿಸಿಪಿ ಅಸೊಸಿಯೇಟ್ಸ್

ಪ್ರಕಾಶಕರ ನುಡಿ

ಸಾಹಿತ್ಯ ಜೀವನದ ಅನುಭವಗಳಿಂದ ಹೊರಹೊಮ್ಮಬೇಕು. ಈ ರೀತಿ ಹೊರಹೊಮ್ಮಿದ ಸಾಹಿತ್ಯ ಸರ್ವಕಾಲಿಕವಾಗಿ ಜನರ ಮನಸ್ಸಿನಲ್ಲಿ ನಿಲ್ಲುತ್ತದೆ. ಶೇಖರ್ ಮತ್ತು ನಾನು ನಮ್ಮ ಅನುಭವಗಳನ್ನು ಹಂಚಿಕೊಳ್ಳುವ ಸಂದರ್ಭದಲ್ಲಿ ಅವರು ನಿರೂಪಿಸಿದ ಹಲವು ಘಟನೆಗಳು ನನ್ನ ಮೇಲೆ ಅಗಾಧವಾದ ಪ್ರಭಾವವನ್ನು ಬೀರಿ, ಜೀವನದ ಉದ್ದೇಶ ಮತ್ತು ಜೀವಿಸುವ ಕಲೆಯ ಕುರಿತು ಚಿಂತಿಸುವಂತೆ ಪ್ರೇರೇಪಿಸಿದವು.

ಕೆಲ ಮಾಸಗಳ ಹಿಂದೆ ಗೆಳೆಯನೊಬ್ಬ ಕೆಲಸವನ್ನು ಕಳೆದುಕೊಂಡು ಹತಾಶನಾಗಿ ಆತ್ಮಹತ್ಯೆಯ ಮಟ್ಟಕ್ಕೆ ತಲುಪಿದ್ದ. ಈ ವಿಚಾರವನ್ನು ಶೇಖರ್‌ರವರ ಬಳಿ ಹೇಳಿಕೊಂಡಾಗ, ಅವರು ಇದೇ ರೀತಿಯ ನೈಜ ಘಟನೆಯೊಂದನ್ನು ತಿಳಿಸಿದರು (ಕಥನ: ನಿನ್ನೊಳಗಿನ ಕೌಶಲ್ಯವೇ, ನಿನ್ನ ಶಕ್ತಿ). ಆ ಘಟನೆಯಿಂದ ಪ್ರೇರಿತನಾದ ನಾನು, ಅದನ್ನು ಗೆಳೆಯನಿಗೆ ತಿಳಿಸಿದೆ. ಇದರ ಪ್ರಭಾವವೆಂಬಂತೆ ಕೆಲ ದಿನಗಳಲ್ಲಿಯೇ ಗೆಳೆಯ ಒಳ್ಳೆಯ ಕೆಲಸವನ್ನು ಹುಡುಕಿಕೊಂಡು, ಹೊಸ ಜೀವನವನ್ನು ಶುರು ಮಾಡಿದನು. ನಾನು ಅವನಿಗೆ ತಿಳಿಸಿದ ಘಟನೆಯೇ ಅವನಿಗೆ ಸ್ಫೂರ್ತಿಯಾಗಿ, ಈ ಗುಣಾತ್ಮಕ ಬದಲಾವಣೆಗೆ ಸಾಕ್ಷಿಯಾಯಿತು ಎಂಬುವುದನ್ನು ಗೆಳೆಯ ನನಗೆ ತಿಳಿಸಿದಾಗ, ಶೇಖರ್‌ರವರ ದೃಷ್ಟಾಂತದಲ್ಲಿನ ಮಹತ್ವದ ಅರಿವಾಯಿತು. ಇದರಿಂದ ಮತ್ತಷ್ಟು ಪ್ರೇರಿತನಾಗಿ, ಈ ರೀತಿಯ ಅವರ ಜೀವನದ ಘಟನೆಗಳು ಇತರರಿಗೂ ತಲುಪಿ, ಕೆಲವರಾದರೂ ಲಾಭ ಪಡೆಯಲೆಂಬ ಆಶಯದೊಂದಿಗೆ ಶೇಖರ್‌ರವರನ್ನು ಈ ಪುಸ್ತಕ ಬರೆಯುವಂತೆ ವಿನಂತಿಸಿದೆ. ನನ್ನ ಕೋರಿಕೆಯಂತೆ ಅವರು 28 ಕಥನಗಳ ಈ ಪುಸ್ತಕವನ್ನು ರಚಿಸಿದರು.

ಈ ಪುಸ್ತಕ ಬೇರೆಯವರ ಜೀವನ ಸುಧಾರಿಸಲು, ದೃಷ್ಟಾಂತ ಕೊಡುವುದಕ್ಕೆ

ಮತ್ತು ಜೀವನದಲ್ಲಿ ಬೇಸತ್ತಾಗ ಮತ್ತೆ ಜೀವನ ಕಟ್ಟಿಕೊಳ್ಳಲು ಸಹಕಾರಿಯಾಗಬಲ್ಲದು. ಈ ಪ್ರಯತ್ನ ನೊಂದ ಮತ್ತು ಸಾಧಿಸುವ ಮನಸ್ಸುಗಳಿಗೆ ಪ್ರೇರಣೆಯಾಗಬಲ್ಲದು. ಪ್ರಕಾಶಕನಾಗಿ ಈ ರೀತಿಯ ಕೃತಿಯನ್ನು ನಿರುತ ಪಬ್ಲಿಕೇಷನ್ಸ್‌ನಿಂದ ಹೊರತರುತ್ತಿರುವುದಕ್ಕೆ ಹೆಮ್ಮೆ ಅನಿಸುತ್ತಿದೆ.

ಹಾದಿಮನಿಯವರು ಅಂದವಾದ ಚಿತ್ರಗಳನ್ನು ರಚಿಸಿ ಕೊಟ್ಟಿರುವುದು ಪುಸ್ತಕ ಆಕರ್ಷಕವಾಗಿ ಹೊರಹೊಮ್ಮಲು ಕಾರಣವಾಗಿದೆ.

ರಮೇಶ ಎಂ.ಎಚ್.
ನಿರುತ ಪಬ್ಲಿಕೇಷನ್ಸ್

ಕೃತಜ್ಞತೆಗಳು

* ನನ್ನ ಮನವಿಯನ್ನು ಮನ್ನಿಸಿ ಪ್ರೇರಣಾತ್ಮಕ ಮುನ್ನುಡಿ ಬರೆದುಕೊಟ್ಟು ಪ್ರೋತ್ಸಾಹಿಸಿದ ನನ್ನ ಗುರುಗಳು, ಅಧ್ಯಕ್ಷರು – ಕರ್ನಾಟಕ ಮಾಲೀಕರ ಸಂಘ ಮತ್ತು ನಾಡಿನ ಹೆಸರಾಂತ ವಕೀಲರಾದ ಶ್ರೀ ಬಿ.ಸಿ. ಪ್ರಭಾಕರ್ ರವರಿಗೆ ಅನಂತಾನಂತ ವಂದನೆಗಳು.

* ತಮ್ಮ ಮುಖಪುಟ ಮತ್ತು ಒಳಗಿನ ಚಿತ್ರಗಳ ಮೂಲಕ ಈ ಕೃತಿಯ ಮೌಲ್ಯವನ್ನು ಹೆಚ್ಚಿಸಿದ ಕಲಾವಿದರಾದ ಹಾದಿಮನಿ ಮತ್ತು ಅವರಿಗೆ ಸ್ಫೂರ್ತಿಯಾಗಿ ಸಹಕರಿಸಿದ ಶ್ರೀಮತಿ ಹಾದಿಮನಿ ರವರಿಗೆ ನನ್ನ ವಂದನೆಗಳು.

* ಪ್ರೋತ್ಸಾಹ ನೀಡುತ್ತಾ ಮಾರ್ಗದರ್ಶಕರಾಗಿರುವ ಶ್ರೀ ಸಯ್ಯದ್ ಅಹ್ಮದ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬಿಯೆಸ್ಸೆ ಮ್ಯಾನುಫ್ಯಾಕ್ಚರಿಂಗ್ ಕಂ. ಪ್ರೈ. ಲಿ., ರವರಿಗೆ ಅನಂತಾನಂತ ವಂದನೆಗಳು.

* ಕಥೆಗಳನ್ನು ಓದಿ ಸೂಕ್ತ ಸಲಹೆಗಳನ್ನು ನೀಡಿದ ಮತ್ತು ಪುಸ್ತಕದ ಕುರಿತು ತಮ್ಮ ಅಭಿಪ್ರಾಯವನ್ನು ಬರೆದು ಕೊಟ್ಟ ಡಾ. ಸಿ.ಆರ್. ಗೋಪಾಲ್ ರವರಿಗೆ ವಂದನೆಗಳು.

* ಕಥೆಗಳನ್ನು ವಿಮರ್ಶಾತ್ಮಕವಾಗಿ ಓದಿ, ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ನೀಡಿದ ಶ್ರೀ ಯೋಗೇಶ್ ಮಾಸ್ಟರ್, ಶ್ರೀ ಗಂಗಾಧರ್ ರೆಡ್ಡಿ ಎನ್. ಮತ್ತು ಶ್ರೀ ನವೀನ್ ರವರಿಗೆ ನನ್ನ ಅನಂತ ವಂದನೆಗಳು.

* ಕೃತಿಯನ್ನು ಪ್ರಕಟಣೆಗೆ ಮುನ್ನ ಓದಿ, ತಮ್ಮ ಅಭಿಪ್ರಾಯವನ್ನು ಬರೆದುಕೊಟ್ಟ...

- ಶ್ರೀ ಡಿ.ಆರ್. ನಾಗರಾಜ್, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ – ಎನ್.ಎಂ.ಎಸ್ ಹೆಚ್.ಆರ್ ಸಲ್ಯೂಷನ್ಸ್ ಮತ್ತು ಮಾಜಿ ರಾಷ್ಟ್ರೀಯ ಅಧ್ಯಕ್ಷರು – ಎನ್ಐಪಿಎಂ.
- ಶ್ರೀ ಗೋಪಿನಾಥ್ ಎಸ್.ಎನ್., ಮಾಜಿ ಅಧ್ಯಕ್ಷರು – ಎನ್ಐಪಿಎಂ ಕರ್ನಾಟಕ ಚಾಪ್ಟರ್.
- ಶ್ರೀ ವಿಠ್ಠಲರಾವ್ ಕೆ., ಮಾಜಿ ಕಾರ್ಯದರ್ಶಿ – ಎನ್ಐಪಿಎಂ ಕರ್ನಾಟಕ ಚಾಪ್ಟರ್.
- ಡಾ. ಜಿ.ಪಿ. ನಾಯಕ್., ನಿರ್ದೇಶಕರು – ಟ್ಯಾಲೆಂಟ್ ಅವಿನ್ಯೂಸ್.
- ಶ್ರೀ ಅಶೋಕ್ ಪ್ರಭು, ಪ್ರಧಾನ ವ್ಯವಸ್ಥಾಪಕರು – ಉತ್ಪಾದನೆಗಳು, ಲಿಂಕನ್ ಹೆಲಿಯೋಸ್ ಇಂಡಿಯಾ ಲಿ.,
- ಶ್ರೀ ನಾಗಭೂಷಣ್, ಉಪ ಪ್ರಧಾನ ವ್ಯವಸ್ಥಾಪಕರು – ಮಾನವ ಸಂಪನ್ಮೂಲ, ಎಸ್ಇಜಿ ಆಟೋಮೋಟಿವ್ ಇಂಡಿಯಾ ಪ್ರೈ. ಲಿ., ರವರಿಗೆ ವಂದನೆಗಳು.

* ಪ್ರತಿಯೊಂದು ಹಂತದಲ್ಲಿಯೂ ತಮ್ಮ ಸಹಕಾರವನ್ನು ನೀಡಿದ ಸಹೋದ್ಯೋಗಿಗಳಾದ ಶ್ರೀ ಮೃತ್ಯುಂಜಯ, ಶ್ರೀ ರಾಘವೇಂದ್ರ ಎಂ.ವಿ., ಶ್ರೀ ಅನಿಲ್ ಕುಮಾರ್ ವಿ., ಶ್ರೀ ರಾಘವೇಂದ್ರ ಯು.ಎಲ್., ಶ್ರೀ ಹರೀಶ್ ಕುಮಾರ್ ಓ.ಕೆ., ಶ್ರೀ ಸಂತೋಷ್ ಬಿ. ಹೋಲಿಯಾಚಿ, ಶ್ರೀ ಕನಕಪ್ಪ ಬಿ. ಬೇಗಾರ, ಶ್ರೀ ಪ್ರಭಾಕರನ್ ಜೆ., ಶ್ರೀಮತಿ ರಶ್ಮಿ ಕೆ., ಮತ್ತು ಶ್ರೀಮತಿ ನೈನಾ ಕೃಷ್ಣನ್‌ರವರಿಗೆ ನನ್ನ ವಂದನೆಗಳು.

* ಕಥನಗಳನ್ನು ಓದಿ, ಸೂಕ್ತ ತಿದ್ದುಪಡಿಗಳನ್ನು ಸೂಚಿಸಿದ ಶಿಕ್ಷಕಿಯಾದ ಶ್ರೀಮತಿ ಸುಜಲ ದೇವಿ, ಸಮಾಜ ಸೇವಕರಾದ ಸತ್ಯನಾರಾಯಣ ಮತ್ತು ಅಶೋಕ್ ರವರಿಗೆ ನನ್ನ ವಂದನೆಗಳು.

* ಈ ಕಥನಗಳನ್ನು ಬರೆಯಲು ಪ್ರೇರೇಪಿಸಿದ ಸಮಾಜಕಾರ್ಯದ ಹೆಜ್ಜೆಗಳು ಪ್ರತಿಕೆಯ ಸಂಪಾದಕರು ಮತ್ತು ನಿರುತ ಪಬ್ಲಿಕೇಷನ್ಸ್ ನ ಪ್ರಕಾಶಕರಾದ ಶ್ರೀ ರಮೇಶ ಎಂ.ಎಚ್. ರವರಿಗೆ ನನ್ನ ವಂದನೆಗಳು.

* ಈ ಕೃತಿಯನ್ನು ಗಣಕಯಂತ್ರದಲ್ಲಿ ಅಚ್ಚುಕಟ್ಟಾಗಿ ಸಿದ್ಧಪಡಿಸಲು ಸಹಕರಿಸಿದ ಶ್ರೀ ಶಿವಕುಮಾರ್, ಗ್ರಾಫಿಕ್ ಡಿಸೈನರ್, ನಿರುತ ಪಬ್ಲಿಕೇಷನ್ಸ್ ರವರಿಗೆ ನನ್ನ ವಂದನೆಗಳು.

* ಈ ಕೃತಿಯ ಕಥನಗಳಿಗೆ ಪ್ರೇರಣೆಯಾದ ಎಲ್ಲಾ ಮಹನೀಯರಿಗೂ ನನ್ನ ವಂದನೆಗಳು.

* ಅಪಾರ ಪ್ರೀತಿಯ ಗೆಳೆಯರು, ಸಹೋದ್ಯೋಗಿಗಳು, ಅಪ್ಪ – ಅಮ್ಮ, ತಮ್ಮ – ನಾದಿನಿ, ಸಂಗಾತಿ ಭಾರತಿ, ನನ್ನ ಶಿಕ್ಷಕಿಯಾಗಿರುವ ಮಗಳು ಹಾರಿಕ ಮತ್ತು ಎಲ್ಲಾ ಕುಟುಂಬದವರಿಗೆ ನನ್ನ ವಂದನೆಗಳು.

ಸವಿಯುವ ಮುನ್ನ...

ನಾವೆಲ್ಲರೂ ಈ ಭೂಮಿಯ ಮೇಲೆ ಅಸ್ತಿತ್ವಗೊಂಡಿದ್ದು ಸ್ವಇಚ್ಛೆಯಿಂದ ಅಲ್ಲವಾದರೂ, ಜೀವಿಸುತ್ತಿರುವುದು ಸ್ವಇಚ್ಛೆಯಿಂದಲೇ. ಈ ಸ್ವಇಚ್ಛೆಯ ಪಯಣದಲ್ಲಿ ನಮ್ಮಲ್ಲಿನ ವಿಶ್ವಮಾನವ ಬಾಹ್ಯ ವಿಚಾರಗಳ ಪ್ರಭಾವದಿಂದ ನಮ್ಮ ಒಳಹೊಕ್ಕಿ ಹೋಗಿದ್ದಾನೆ ಮತ್ತು ಹೊರಬರುವ ಸರ್ವಪ್ರಯತ್ನಗಳಲ್ಲಿ ಸತತವಾಗಿ ತೊಡಗಿದ್ದಾನೆ. ಆದರೆ, ನಮ್ಮ ಹೊರಗಿನ ವ್ಯಕ್ತಿಯಾದ ಅಲ್ಪಮಾನವ, ಅವನನ್ನೂ ಸದಾಕಾಲ ಹೊರಬರದಂತೆ ನೋಡಿಕೊಳ್ಳುತ್ತಿದ್ದಾನೆ. ಇವರಿಬ್ಬರ ನಿರಂತರ ಕದನದಲ್ಲಿ, ಗೆಲ್ಲುವ ವ್ಯಕ್ತಿಯು ನಮ್ಮ ಮೇಲೆ ತನ್ನ ಅಧಿಪತ್ಯವನ್ನು ಸಾಧಿಸುತ್ತಾನೆ. ಅಂತಹ ಅಧಿಪತ್ಯದ ಅಧಿಪತಿ ನಮ್ಮೊಳಗಿನ ವಿಶ್ವಮಾನವನಾದರೇ, ನಮ್ಮ ವ್ಯಕ್ತಿತ್ವ ಪರಿಪೂರ್ಣವಾಗಿ ಜೀವನದ ಸಾರ್ಥಕತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.

ಇಂತಹ ಸಾಧನೆ ಸಾಧಿಸಬೇಕಾದರೆ, ನಮ್ಮ ಒಳಗಿನ ವಿಶ್ವಮಾನವ ಹೊರಗಿನ ಅಲ್ಪಮಾನವನಿಗಿಂತ ಶಕ್ತಿವಂತನಾಗಬೇಕು. ಅಂತಹ ಶಕ್ತಿಯನ್ನು ಹುಡುಕುವುದು ಮತ್ತು ಪಡೆಯುವುದು ಅಸಾಮಾನ್ಯವೆಂದು ಭಾವಿಸಿರುವುದು ಮಾನವ ಸಹಜ ಗುಣ. ಆ ಅಸಾಧಾರಣ ಶಕ್ತಿಯನ್ನು ನಾವು ನಮ್ಮ ಸುತ್ತ–ಮುತ್ತಲಿನ ವ್ಯಕ್ತಿತ್ವಗಳಿಂದ ಮತ್ತು ವಸ್ತುಗಳಿಂದ ಪಡೆಯಬಹುದು. ಅದನ್ನು ನಮ್ಮದಾಗಿಸಿಕೊಳ್ಳಬೇಕಾದರೆ, ನಾವು ಮೊದಲಿಗೆ ಆ ಶಕ್ತಿಯನ್ನು ಗುರುತಿಸುವ ಮತ್ತು ಗ್ರಹಿಸುವ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು. ಅಂತಹ ದೃಷ್ಟಿಕೋನದಿಂದ ಈ ಸಮಾಜವನ್ನು ನೋಡಲಾರಂಭಿಸಿದಾಗ, ನಾ ಕಂಡ ವ್ಯಕ್ತಿತ್ವಗಳಿಂದ ಕಲಿತ ಅಸಾಮಾನ್ಯ ವಿಚಾರಗಳೇ ಈ ಹೊತ್ತಿಗೆಯ ಕಥಾವಸ್ತುಗಳು ಮತ್ತು ಅವರೇ ಇಲ್ಲಿನ ಕಥಾನಾಯಕರು.

ಅಂತಹ ಅಸಾಮಾನ್ಯ ನಾಯಕರಿಂದಲೇ ಉತ್ತಮ ವ್ಯಕ್ತಿತ್ವ ಮತ್ತು ಸಾಧನೆಯ ಹಾದಿಯನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಈ ಹಾದಿಯನ್ನು ಇತರರಿಗೂ

ದೊರಕಿಸಬೇಕೆಂಬ ಉದ್ದೇಶವೇ ಈ ಹೊತ್ತಿಗೆಯ ಆಶಯ. ಈ ಕಥನಗಳ ವಿಷಯಗಳು ಪ್ರೇರಣಾತ್ಮಕವಾಗಿ ಪ್ರಭಾವ ಬೀರಬಲ್ಲ ಸಾಮರ್ಥ್ಯವನ್ನು ಹೊಂದಿವೆ ಎಂದು ಭಾವಿಸುತ್ತಾ, ಇಲ್ಲಿನ ಒಂದಲ್ಲಾ-ಒಂದು ಕಥೆಯಲ್ಲಿ ನೀವು ನಿಮ್ಮನ್ನು ಅಥವಾ ನಿಮಗೆ ತಿಳಿದಿರುವವರನ್ನು ಭೇಟಿ ಮಾಡುವುದರ ಮೂಲಕ ಕಥೆಯನ್ನು ನಿಮ್ಮದಾಗಿಸಿಕೊಳ್ಳುತ್ತೀರಿ ಎಂಬ ವಿಶ್ವಾಸ ನನಗಿದೆ. ಎಲ್ಲರೂ ಎಲ್ಲವನ್ನೂ ಅನುಭವಿಸಲು ಅಥವಾ ತಿಳಿಯಲು ಸಾಧ್ಯವಿಲ್ಲ. ಆದರೆ, ವಿಚಾರಗಳ ವಿಲೇವಾರಿ ಎಲ್ಲರಿಗೂ ಎಲ್ಲಾ ವಿಷಯಗಳನ್ನು ತಿಳಿಯಲು ಅವಕಾಶಗಳನ್ನು ಕಲ್ಪಿಸುತ್ತದೆ. ಅಂತಹ ಕೆಲವು ವಿಚಾರಗಳು ಈ ಹೊತ್ತಿಗೆಯಿಂದ ನಿಮಗೆ ಸಿಗುವುದರ ಮೂಲಕ ಸಾಧನೆಗೆ ಸಾಧನವಾಗಬಹುದು.

ಈ ಕಥನಗಳನ್ನು ಗೆಳೆಯ ರಮೇಶ್‌ರೊಂದಿಗೆ ಮುಂಜಾನೆಯ ನಡಿಗೆಯಲ್ಲಿ ಹಂಚಿಕೊಳ್ಳುತ್ತಿದ್ದಾಗ, ಅದರಿಂದ ಪ್ರೇರಿತರಾದ ಅವರ ಪ್ರೇರಣೆಯಿಂದ ರೂಪುಗೊಂಡ ಹೊತ್ತಿಗೆಯೇ ಈ "ಬದುಕು ಬದಲಾಯಿಸಿದ ಕಥನಗಳು." ಈ ಕಥನಗಳಲ್ಲಿನ ವ್ಯಕ್ತಿತ್ವಗಳು ಮತ್ತು ವಿಚಾರಗಳು ನೈಜ ಸಂಗತಿಗಳು. ಮೂಲವಿಚಾರಕ್ಕೆ ಧಕ್ಕೆ ಬರದಂತೆ, ಕಥಾ ದೃಷ್ಟಿಯಿಂದ ಕೆಲವು ಸಣ್ಣ ಬದಲಾವಣೆಗಳನ್ನು ಪ್ರಾಮಾಣಿಕವಾಗಿ ಮಾಡಿಕೊಂಡಿದ್ದೇನೆ.

ಇದು, ನನ್ನ ಮೊದಲ ಕೃತಿಯಾಗಿರುವುದರಿಂದ ಮತ್ತು ನಾನು ಮೂಲತಃ ಲೇಖಕನಲ್ಲದ ಕಾರಣ ಕೆಲವು ಸಣ್ಣ-ಸಣ್ಣ ತಪ್ಪುಗಳು ನಿಮ್ಮ ಗಮನಕ್ಕೆ ಬರಬಹುದು. ಅಂತಹ ತಪ್ಪುಗಳಿಗೆ ನಿಮ್ಮ ಕ್ಷಮೆಯಿರಲಿ ಮತ್ತು ಅವುಗಳನ್ನು ತಾವು ತಿಳಿಸಿದರೆ, ವಿನಮ್ರತೆಯಿಂದ ಸ್ವೀಕರಿಸುತ್ತೇನೆ ಮತ್ತು ಮುಂದಿನ ಮುದ್ರಣದಲ್ಲಿ ಸರಿಪಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ.

ಕೊನೆಯದಾಗಿ, ಈ ಪುಸ್ತಕವನ್ನು ಪಡೆದು, ನಿಮ್ಮ ಅಮೂಲ್ಯವಾದ ಸಮಯವನ್ನು ಓದುವುದಕ್ಕಾಗಿ ಕೊಟ್ಟಿರುವುದಕ್ಕೆ ನನ್ನ ಅನಂತ ವಂದನೆಗಳು. ನೀವು ಓದಿ,

ನಿಮಗೆ ಇಷ್ಟವಾದರೆ ಅಥವಾ ಇಷ್ಟವಾಗದಿದ್ದರೆ, ಆ ನಿಮ್ಮ ಮಹತ್ವಪೂರ್ಣವಾದ ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ನನ್ನ ವಿಮಂಚೆಗೆ (e-mail) ಕಳಿಸಿಕೊಡಬೇಕಾಗಿ ತಮ್ಮಲ್ಲಿ ವಿನಂತಿ.

ಉನ್ನತವಾಗಿರಿ (Be Great)

ಶೇಖರ್ ಗಣಗಲೂರು

ಮೊಬೈಲ್: 91–9632711228

ದಿನಾಂಕ: 17/11/2018

ವಿಮಂಚೆ: kathanagalu@gmail.com

The great man is not the one who makes others feel small;

but is the one who makes others feel great.

ನಾನು ಕನ್ನಡಿಗ, ಅದುವೇ ನನ್ನ ಹೆಮ್ಮೆ ಮತ್ತು ಶಕ್ತಿ.....

ಪ್ರೀತಿಸು....ಎಲ್ಲರೂ ಮೆಚ್ಚುವಂತೆ,

ಸೃಷ್ಟಿಸು....ಎಲ್ಲರೂ ಹಂಬಲಿಸುವಂತೆ,

ಗ್ರಹಿಸು....ಎಲ್ಲರೂ ಎಚ್ಚೆತ್ತುಕೊಳ್ಳುವಂತೆ,

ಪ್ರಶ್ನಿಸು....ಎಲ್ಲರೂ ವಿಚಾರ ಮಾಡುವಂತೆ,

ಶ್ರಮಿಸು....ಎಲ್ಲರೂ ಒಂದಾಗುವಂತೆ,

ಸಾಧಿಸು....ಎಲ್ಲರೂ ಹೆಮ್ಮೆ ಪಡುವಂತೆ,

ಭೋದಿಸು....ಎಲ್ಲರೂ ಸ್ಫೂರ್ತಿಗೊಳ್ಳುವಂತೆ,

ಆಚರಿಸು....ಎಲ್ಲರೂ ಪಾಲನೆ ಮಾಡುವಂತೆ,

ಪ್ರೇರೇಪಿಸು....ಎಲ್ಲರೂ ಗುರಿ ತಲುಪುವಂತೆ,

ಜೀವಿಸು....ಎಲ್ಲರೂ ಅನುಸರಿಸುವಂತೆ,

ಇದುವೇ....ನಮ್ಮ ಕನ್ನಡತನ!

ಶೇಖರ್ ಗಣಗಲೂರು

ಪರಿವಿಡಿ

1.	ಮನದ ಕದ ತಟ್ಟಿದ ಪತ್ರ	– 19
2.	ಲೋಕಾತೀತಪುರುಷ!	– 25
3.	ನಂಬಿಕೆ...ದಾರಿ ಬೆಳಕು	– 29
4.	ನಮ್ಮ ಜೀವನ, ನಮ್ಮ ಆಯ್ಕೆ	– 35
5.	ನಮ್ಮತನ	– 38
6.	ಇತರರ ಬೆಳಕು	– 41
7.	ನಮ್ಮಲ್ಲಿರುವುದು ಮಹತ್ವವಾದದ್ದು...	– 44
8.	ಅಪ್ಪನ 25 ಪೈಸೆಯ ಮಿಠಾಯಿ	– 48
9.	ವ್ಯಕ್ತಿತ್ವ...ವ್ಯಕ್ತಿತ್ವದೊಂದಿಗೆ...	– 51
10.	ತುಸು ಹೆಚ್ಚಿನ ಶ್ರಮ...	– 55
11.	ಉತ್ಕಟವಾದ ಆಯ್ಕೆಗಳು	– 59
12.	ಮಂಗಳಮುಖಿ...	– 63
13.	ಉಚಿತ ಊಟವಿಲ್ಲ...	– 67
14.	ಹಸಿರು ಮಾಯವಾಯಿತು...	– 72
15.	ಕೊಂಚ ಜಾಸ್ತಿ ಬೇಕು...	– 76
16.	ನಕಾರಾತ್ಮಕತೆಯಲ್ಲಿಯೂ ಸಕಾರಾತ್ಮಕತೆಯಿದೆ...	– 79
17.	ಅಮ್ಮನ ವಿಮಾನದ ಆಸೆ...	– 84
18.	ನಾವು ನೋಯಿಸುವುದರಲ್ಲಿ ನಿಸ್ಸೀಮರು...?	– 88
19.	ನನ್ನ ಸೂಪರ್ ಹೀರೋ...	– 91
20.	ಆ ವ್ಯಕ್ತಿತ್ವಗಳ ಸಾಕ್ಷಾತ್ಕಾರ...	– 97
21.	ನೋವಿನಲ್ಲೂ ಸಂಬಂಧಗಳು...	– 101

22.	ಬದಲಾವಣೆ ಬದಲಾಯಿಸಬಲ್ಲದು...	– 105
23.	ಬದಲಾಯಿಸಿದ ಪ್ರಾಮಾಣಿಕತೆ	– 111
24.	ಅಪ್ಪನ ಎರಡನೆಯ ಮಗ...	– 115
25.	ಗುರುಗಳಿಗೆ ಅರ್ಪಣೆ...	– 120
26.	ಅತ್ತೆ, ಸೊಸೆಯಾಗಬೇಕೆಂಬ ಆಸೆ...	– 125
27.	ನಿನ್ನೊಳಗಿನ ಕೌಶಲ್ಯವೇ, ನಿನ್ನ ಶಕ್ತಿ...	– 130
28.	ನಾಯಕ, ನಾಯಕನಿಗೆ ತೋರಿಸಿದ ದಾರಿ...	– 135
	ಗುರುಗಳ ನಲ್ನುಡಿಗಳು	– 141

ಈ ಪುಸ್ತಕದ ಆಯ್ದ ಕೆಲವೇ ಕೆಲವು ಪುಟಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಸಂಪೂರ್ಣ ಪುಸ್ತಕಕ್ಕಾಗಿ ಸಂಪರ್ಕಿಸಿ:

NIRUTA Publications

ನಿರುತ ಪಬ್ಲಿಕೇಷನ್ಸ್

#326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,

ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,

ಬೆಂಗಳೂರು-560056. ದೂ: 080-23213710, 8073067542

ಇಮೇಲ್: nirutapublications@gmail.com

www.nirutapublications.org

ಪ್ರಪಂಚದ ಅತ್ಯಂತ ಅಮೂಲ್ಯವಾದ ಸಂಪನ್ಮೂಲ ನೀರು,

ಮಿತವಾಗಿ ಬಳಸಿ ಮತ್ತು ಭವಿಷ್ಯವನ್ನು ಕಾಪಾಡಿ.

ಕಥನ – 01

ಮನದ ಕದ ತಟ್ಟಿದ ಪತ್ರ

ಸುಮಾರು 15 ವರುಷಗಳ ನಂತರ, ಮಾಲೂರು ತಾಲ್ಲೂಕಿನ ಚಿಕ್ಕತಿರುಪತಿ ಶ್ರೀ ವೆಂಕಟೇಶ್ವರ ಸ್ವಾಮಿ ಜಾತ್ರೆಯಲ್ಲಿ ಕಾಂತಮ್ಮ ಟೀಚರನ್ನು ಭೇಟಿಯಾದೆ. ಅವರು ನನ್ನ ಪ್ರಾಥಮಿಕ ಶಾಲೆಯ ಟೀಚರ್. ಇಂದು ನಾನು ಬರೆದಿರುವ ಈ ಪದಗಳಿಗೆ ಭದ್ರ ಬುನಾದಿ ಹಾಕಿದವರು. ಕೈ ಹಿಡಿದು ಅಕ್ಷರ ತಿದ್ದಿಸುವುದರ ಮೂಲಕ ಮಾತೃಭಾಷೆಯನ್ನು ಕಲಿಸಿದ ನನ್ನ ನೆಚ್ಚಿನ ಟೀಚರ್. ಕೇವಲ ನಾಲ್ಕು ವರುಷಗಳು ಕಲಿಸಿದ್ದರೂ, ಪದವಿ ಮುಗಿಯುವವರೆಗೂ ತಾಯಿಯಂತೆ ನನ್ನ ವಿದ್ಯಾಭ್ಯಾಸದ ಬಗ್ಗೆ ಕಾಳಜಿ ಹೊಂದಿದ್ದವರು. ನನ್ನ ಶೈಕ್ಷಣಿಕ ಪಯಣದ ಪ್ರತಿ ಸಣ್ಣ-ಸಣ್ಣ ಸಾಧನೆಗಳನ್ನು ಅವರೊಂದಿಗೆ ಹಂಚುವ ಮೂಲಕ ದಾರಿ ಕಂಡುಕೊಂಡೆನು. ಪದವಿ ಮುಗಿಸಿ ಸ್ನಾತಕೋತ್ತರ ಪದವಿಗೆ ಸೇರಿದ ನಾನು ಅರಿವಿಲ್ಲದೆಯೇ ಟೀಚರನ್ನು ಮರೆತಿದ್ದು ಬದಲಾದ ನನ್ನ ವ್ಯಕ್ತಿತ್ವದ ಸೂಚಕವಾಗಿತ್ತು.

ಮಾತೃಭಾಷೆ ಹೆತ್ತ ತಾಯಿ ಇದ್ದಂತೆ. ಯಾವ ರೀತಿ ಇತರೆ ಯಾವುದೇ ಸಂಬಂಧಗಳು ತಾಯಿಯ ಸ್ಥಾನವನ್ನು ತುಂಬಲು ಸಾಧ್ಯವಿಲ್ಲವೋ, ಅದೇ ರೀತಿಯಲ್ಲಿ ಯಾವ ಭಾಷೆಯು ಮಾತೃಭಾಷೆಯ ಸ್ಥಾನ ತುಂಬಲು ಸಾಧ್ಯವಿಲ್ಲ. ಮಾತೃಭಾಷೆ ನಮ್ಮ ಕರುಳ ಭಾಷೆ ಮತ್ತು ನಮ್ಮತನದ ಸಂಕೇತ.

ಎರವಲು ಪಡೆದ ಆಂಗ್ಲ ಭಾಷೆ, ಈ ದಿನ ನಮ್ಮ ಭಾಷೆಯನ್ನು ವಿನಾಶದ ಅಂಚಿಗೆ ನೂಕುತ್ತಿದೆ. ಆಂಗ್ಲ ಭಾಷೆ ವ್ಯವಹಾರಿಕ ಭಾಷೆಯಾಗಿ ಪೂರಕವಾಗಿರುವುದು ಉತ್ತಮ ವಿಷಯವೇ. ಆದರೆ ಅದು ನಮ್ಮ ಮನೆಗಳಿಗೆ ಮತ್ತು ಮನಸ್ಸುಗಳಿಗೆ ಲಗ್ಗೆಯಿಟ್ಟು ನಮ್ಮನ್ನು ತನ್ನ ಹತೋಟಿಯ ತೆಕ್ಕೆಯಲ್ಲಿ ಬಂಧಿಸುತ್ತಿದೆ.

ನಾವು ಬೆಳೆದಷ್ಟು ನಮ್ಮ ಭಾಷೆಯನ್ನು ಬೆಳೆಸಬೇಕು. ಬೆಳೆಸಿದಷ್ಟು ಅದು ನಮ್ಮತನವನ್ನು ಬೆಳೆಸಿ, ನಮ್ಮ ಸ್ವಾಭಿಮಾನವನ್ನು ಉಳಿಸುತ್ತದೆ. ಭಾಷೆಯನ್ನು ಬಳಸುವ, ಉಳಿಸುವ ಮತ್ತು ಕಲಿಸುವ ಕಾಯಕ ನಮ್ಮದಾಗಬೇಕು.

ಜಾತ್ರೆಯಲ್ಲಿ ನನ್ನನ್ನು ಕಂಡ ಟೀಚರ್ ಆತ್ಮೀಯತೆಯಿಂದ ಹೆಸರಿಟ್ಟು ಕರೆದರು. ಅದುವರೆಗೂ ಅವರನ್ನು ಗಮನಿಸದ ನಾನು, ಆ ಕರೆ ಕೇಳಿಸಿದ ತಕ್ಷಣ ಅವರನ್ನು ಕಂಡು ಸಂತಸಗೊಂಡೆ.

ಮಡದಿ ಮತ್ತು ಮಗಳ ಜೊತೆಯಿದ್ದ ನಾನು, ಟೀಚರ್ ಬಳಿ ನಡೆದಾಗ ಮನದಲ್ಲಿ ಹೇಳಲಾರದ ಒಂದು ರೀತಿಯ ತಳಮಳವಾಗುತ್ತಿತ್ತು. ಅವರ ಬಳಿ ತಲುಪಿದ ತಕ್ಷಣ ಹುಮ್ಮಸ್ಸಿನಿಂದ "ಹಾಯ್ ಟೀಚರ್, ಹೌ ಆರ್ ಯು?" (Hi Teacher, How are you?) ಎಂದೆ.

ಅದಕ್ಕವರು "ಚೆನ್ನಾಗಿದ್ದೀನಿ, ನೀನೂ?" ಎಂದು ತುಂಬಾ ಆತ್ಮೀಯತೆಯಿಂದ ಕೇಳಿದರು.

"ಐ ಆ್ಯಮ್ ಫೈನ್ ಮೇಡಮ್. ಥ್ಯಾಂಕ್ ಯು. ಮೀಟ್ ಮೈ ವೈಫ್ & ಡಾಟರ್" (I am fine Madam. Thank You. Meet my Wife & Daughter) ಎನ್ನುತ್ತಾ ಅವರನ್ನು ಟೀಚರ್‌ಗೆ ಪರಿಚಯಿಸಿದೆ. ಆದರೆ ಅವರ ಮೊಗದಲ್ಲಿ ಏನೋ ಹೇಳಲಾರದ ಅಸಮಾಧಾನದ ಛಾಯೆಯಿತ್ತು. ಮುಂದುವರೆಯುತ್ತಾ ನನ್ನ ವಿಸಿಟಿಂಗ್ ಕಾರ್ಡನ್ನು ತೆಗೆದು ಟೀಚರ್‌ಗೆ ಕೊಡಲು ಮುಂದಾದೆ. ಟೀಚರ್ ಅದನ್ನು ವಿನಯದಿಂದ ಸ್ವೀಕರಿಸಿದರು. "ಟೀಚರ್, ದಿಸ್ ಇಸ್ ಮೈ ಬಿಸಿನೆಸ್ ಕಾರ್ಡ್, ಮೈ ಕಾಂಟ್ಯಾಕ್ಟ್ ನಂಬರ್ ಇಸ್ ಇನ್ ದಿ ಕಾರ್ಡ್, ಐ ಆ್ಯಮ್ ಗೆಟ್ಟಿಂಗ್ ಲೇಟ್, ಐ ನೀಡ್ ಟು ಮೇಕ್ ಅ ಮೂವ್" (Teacher, this is my business card; my contact number is in the card, I am getting late, I need to make a move) ಎನ್ನುತ್ತಾ, ಮಗಳನ್ನು ಟೀಚರ್‌ಗೆ "ಬೈ" (Bye) ಹೇಳುವಂತೆ ಹೇಳಿದೆ. ಮಗಳು, "ಬೈ ಆಂಟಿ" (Bye Aunty) ಎನ್ನುತ್ತಾ ಅಲ್ಲಿಂದ ನಾವು ಹೊರಟಾಗ, ದಿಟ್ಟ ದೃಷ್ಟಿಯಿಂದ ಟೀಚರ್ ನಮ್ಮನ್ನೇ ನೋಡುತ್ತಾ ಅಲ್ಲೇ ನಿಂತಿದ್ದರು.

ಈ ಘಟನೆ ನಡೆದು 20 ದಿನಗಳು ಕಳೆದುಹೋಗಿದ್ದವು. ಆ ಭೇಟಿಯನ್ನು ನಾನು ಪೂರ್ತಿಯಾಗಿ ಮರೆತುಹೋಗಿದ್ದೆ. ಅದೊಂದು ದಿನ ಸಂಜೆ ಆಫೀಸ್‌ನಿಂದ ಮನೆಗೆ ಬಂದಾಗ, ಹೆಂಡತಿ ನಗುತ್ತಾ ಒಂದು ಪತ್ರ ಕೊಟ್ಟಳು. ಹಲವು ವರುಷಗಳ ನಂತರ ಬಂದ ಪತ್ರ ಅದಾಗಿತ್ತು. ಯಾರಪ್ಪ ಈ ಇ–ಮೇಲ್ ಮತ್ತು ವಾಟ್ಸಪ್ ಯುಗದಲ್ಲಿ ಪತ್ರ ಬರೆದಿರುವುದು ಎಂದು ಆಶ್ಚರ್ಯವಾಯಿತು. ಆ ಪತ್ರದ ಮೇಲಿನ ಕೈಬರಹವನ್ನು ನೋಡುತ್ತಿದ್ದಂತೆ ತುಂಬಾ ಹತ್ತಿರವಾದವರದು ಎನಿಸಿತು. ಮನಸ್ಸು ನಿರ್ಮಲವಾಗಿ, ತಾನಾಗಿಯೇ ಶಾಂತತೆ ಮೂಡಿತು. ಎರಡು ಕೈಗಳಿಂದ ಪತ್ರವನ್ನು ಹಿಡಿದು ನಿಧಾನವಾಗಿ ಸೋಫಾದ ಮೇಲೆ ಕುಳಿತೆ. ಸೂಜಿಗೆ ದಾರ ಪೋಣಿಸುವಂತೆ, ಪತ್ರದ ಲಕೋಟೆಯನ್ನು ತೆಗೆದಾಗ ಅದರಲ್ಲಿ ಹಳದಿ ಬಣ್ಣದ ನೋಟು ಪುಸ್ತಕದ ಒಂದು ಕಾಗದವಿತ್ತು. ಅದನ್ನು ನೋಡುತ್ತಿದ್ದಂತೆ ಅದು ಕಾಂತಮ್ಮ ಟೀಚರ್‌ನದು ಎಂದು ತಿಳಿಯಿತು. ಅವರಿಗೆ ಹಳದಿ ಬಣ್ಣದ ನೋಟು ಪುಸ್ತಕವೆಂದರೆ ತುಂಬಾ ಇಷ್ಟ. ಪುಸ್ತಕಗಳಲ್ಲಿ ಉಳಿದ ಹಾಳೆಗಳನ್ನು ಅವರು ಪೋಲು ಮಾಡದೆ ಬರೆಯುವುದಕ್ಕೆ ಬಳಸುತ್ತಿದ್ದರು. ತುಂಬಾ ದಿನಗಳ ನಂತರ ಬಂದ ಕಾಂತಮ್ಮ ಟೀಚರ್ ಪತ್ರ ಅದಾದುದ್ದರಿಂದ ಹುಮ್ಮಸ್ಸಿನಿಂದ ಓದಲು ಶುರು ಮಾಡಿದೆ.

ಈ ಪುಸ್ತಕದ ಆಯ್ದ ಕೆಲವೇ ಕೆಲವು ಪುಟಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಸಂಪೂರ್ಣ ಪುಸ್ತಕಕ್ಕಾಗಿ ಸಂಪರ್ಕಿಸಿ:

ನಿರುತ ಪಬ್ಲಿಕೇಷನ್ಸ್

#326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,
ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,
ಬೆಂಗಳೂರು-560056. ದೂ: 080-23213710, 8073067542

ಇಮೇಲ್: nirutapublications@gmail.com

www.nirutapublications.org



ಇತರರ ಬೆಳಕು

ನಮ್ಮ ಬದುಕಿನ ಪಯಣ ಇತರರ ಸಹಕಾರದಿಂದಲೇ. ಇತರರ ಸಹಾಯ ಮತ್ತು ಸಹಕಾರವಿಲ್ಲದೆ ನಾವು ಜೀವಿಸಲು ಸಾಧ್ಯವೇ ಇಲ್ಲ. ಇತರರು, ನಾವು ಬೆಳೆದಂತೆ ಬೆಳೆಸುವವರು ಮತ್ತು ಸೋತಂತೆ ಸೋಲಿಸುವವರು. ಹಾಗಾಗಿ ಇತರರೊಂದಿಗೆ ಹೊಂದಿಕೊಂಡು ಅವರ ಸಾಮರ್ಥ್ಯಗಳಿಂದ ನಮ್ಮ ನ್ಯೂನತೆಗಳನ್ನು ಮತ್ತು ನಮ್ಮ ಸಾಮರ್ಥ್ಯಗಳಿಂದ ಅವರ ನ್ಯೂನತೆಗಳನ್ನು ಸರಿದೂಗಿಸಿಕೊಂಡು ಬಾಳುವ ಜೀವನ ನಮ್ಮದಾಗಬೇಕು.

ಆ ದಿನ, ಕಛೇರಿಯಿಂದ ಹೊರಡುವ ಹೊತ್ತಿಗೆ ರಾತ್ರಿ 10 ಘಂಟೆ ದಾಟಿತ್ತು. ಅವಸರವಾಗಿ ಕಾರಿನಲ್ಲಿ ಮನೆಯ ಕಡೆ ಹೊರಟೆ. ಸ್ವಲ್ಪ ದೂರ ಹೋಗುತ್ತಿದ್ದಂತೆ ಕಾರಿನ ಎರಡೂ ದೀಪಗಳು ಆರಿ ಹೋದವು. ಕತ್ತಲು ಗಾಢವಾಗಿದ್ದ ಕಾರಣ ಬೆಳಕಿಲ್ಲದೆ ಮುಂದೆ ಸಾಗುವುದು ಅಸಾಧ್ಯವಾಯಿತು. ಮೂವತ್ತು ನಿಮಿಷಗಳು ಕಳೆದವು. ಏನೂ ತೋಚಲಿಲ್ಲ. ಆ ಸಮಯಕ್ಕೆ ಸರಿಯಾಗಿ, ಅದೇ ದಾರಿಯಲ್ಲಿ ಚಲಿಸುತ್ತಿದ್ದ ಸಹೋದ್ಯೋಗಿಯೊಬ್ಬ ನನ್ನ ಕಾರನ್ನು ಕಂಡು ಹತ್ತಿರಕ್ಕೆ ಬಂದನು. ಅವನು ತನ್ನ ಬೈಕ್ ಇಳಿಯುತ್ತಿದ್ದಂತೆ "ಸರ್, ಏನಾಯಿತು?" ಎಂದನು. ಅವನಿಗೆ ನನ್ನ ಪರಿಸ್ಥಿತಿಯನ್ನು ವಿವರಿಸಿದೆ. ಅದನ್ನು ಕೇಳುತ್ತಿದ್ದಂತೆ ಅವನು "ಸರ್, ಅಷ್ಟೇನಾ?" ಎಂದು ಜೋರಾಗಿ ನಕ್ಕನು.

ಅವನ ಪ್ರತಿಕ್ರಿಯೆಯನ್ನು ಕಂಡು ಕೋಪ ಬಂದರೂ, ವ್ಯಕ್ತಪಡಿಸುವ ಪರಿಸ್ಥಿತಿ ನನ್ನದಾಗಿರಲಿಲ್ಲ. ನನ್ನ ಇರುಸುಮುರುಸನ್ನು ಗಮನಿಸಿದ ಅವನು "ಸರ್, ತಲೆ ಕೆಡಿಸಿಕೊಳ್ಳಬೇಡಿ. ನಾನು ನನ್ನ ವಾಹನದಲ್ಲಿ ಮುಂದೆ ಹೋಗುತ್ತೇನೆ, ನೀವು ಕಾರಿನಲ್ಲಿ ನನ್ನ ವಾಹನದ ಬೆಳಕಿನಲ್ಲಿ ನನ್ನನ್ನು ಹಿಂಬಾಲಿಸಿ," ಎಂದು ತುಂಬ ಆತ್ಮವಿಶ್ವಾಸದಿಂದ ಸಲಹೆ ನೀಡಿದನು.

ಅವನು ಕೊಟ್ಟ ಸಲಹೆ ಆ ಸಮಯಕ್ಕೆ ತರ್ಕಬದ್ಧವಾಗಿದ್ದರೂ ಅದು ನನಗೆ ಸರಿ ಕಾಣಿಸಲಿಲ್ಲ. ಆದರೂ, ವಿಧಿಯಿಲ್ಲದೆ ಅವನು ಹೇಳಿದಂತೆ ಮುಂದೆ

ಸಾಗತೊಡಗಿದೆವು. ಅವನ ವಾಹನದ ಬೆಳಕಿನಲ್ಲಿ ನಾನು ಯಾವ ತೊಂದರೆಯಿಲ್ಲದೆ ಮುಂದೆ ಸಾಗುತ್ತಾ, ಮನೆ ತಲುಪಿದೆ.

ಅವನ ವಾಹನದ ಬೆಳಕು ಆ ದಿನ ನನ್ನನ್ನು ಸುರಕ್ಷತೆಯಿಂದ ಮನೆ ಸೇರಿಸಿತ್ತು. ನನ್ನ ವಾಹನದಲ್ಲಿನ ನ್ಯೂನತೆ ಅವನ ವಾಹನದ ಸಾಮರ್ಥ್ಯದಿಂದ ಮರೆಯಾಗಿ ಹೋಯಿತು.

ನಾವು ಸಹ ಜೀವನದಲ್ಲಿ ಇತರರ ಸಾಮರ್ಥ್ಯದ ಬೆಳಕಿನಲ್ಲಿ ನಮ್ಮ ನ್ಯೂನತೆಗಳನ್ನು ಸರಿಪಡಿಸಿಕೊಂಡು ನಮ್ಮ ಗುರಿಯನ್ನು ತಲುಪಬೇಕು. ಎಲ್ಲಾ ಸಾಮರ್ಥ್ಯಗಳು ನಮ್ಮಲ್ಲಿರದ ಕಾರಣ ಇತರರ ಸಹಕಾರವಿಲ್ಲದೆ ನಮ್ಮ ಗುರಿಯನ್ನು ತಲುಪಲಾರೆವು.

ಈ ಘಟನೆಯಿಂದ ಸ್ಫೂರ್ತಿಗೊಂಡ ನಾನು ಆ ದಿನದಿಂದ ನನ್ನಲ್ಲಿನ ನೂನ್ಯತೆಗಳನ್ನು ಪ್ರಾಮಾಣಿಕವಾಗಿ ಅರ್ಥಮಾಡಿಕೊಂಡು ಅವುಗಳು ಇತರರ ಸಾಮರ್ಥ್ಯಗಳಿಂದ ನನ್ನಲ್ಲಿ ಮರೆಯಾಗುವಂತೆ ನೋಡಿಕೊಳ್ಳುತ್ತಿದ್ದೇನೆ. ಈ ಮನೋಭಾವನೆ, ಆ ನನ್ನ ನೂನ್ಯತೆಗಳನ್ನು ನನ್ನ ಸಾಮರ್ಥ್ಯಗಳನ್ನಾಗಿ ಮಾರ್ಪಾಡಿಸುವುದರಲ್ಲಿ ಯಶಸ್ವಿಯಾಗಿ ನನ್ನ ಸಾಧನೆಗೆ ಪೂರಕವಾಗಿದೆ.

ಚಿಂತನ–ಮಂಥನ

1. ನಾವೇಕೆ ಇತರರಿಗಿಂತ ಶ್ರೇಷ್ಠರೆಂದು ತೀರ್ಮಾನಿಸಿ ಅದನ್ನು ಪ್ರಮಾಣೀಕರಿಸಲು ಪ್ರಯತ್ನಿಸುತ್ತೇವೆ?
2. ಇತರರ ಸಹಾಯವಿಲ್ಲದೇ ರೂಪಿಸಿಕೊಳ್ಳುವ ಜೀವನ ಯಾವ ರೀತಿಯ ದೃಷ್ಟಾಂತವಾಗಬಲ್ಲದು?

ಕಥನ – 07

ನಮ್ಮಲ್ಲಿರುವುದು ಮಹತ್ವವಾದದ್ದು...

ವಿವೇಕ್, ಪ್ರತಿಷ್ಠಿತವಾದ ಕಂಪನಿಯೊಂದರಲ್ಲಿ ಮಾರ್ಕೆಟಿಂಗ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದನು. ಅವನ ಉನ್ನತ ಅಧಿಕಾರಿ ಸೀನಿಯರ್ ಮ್ಯಾನೇಜರ್ ಆಗಿದ್ದರು. ಕೆಲಸದ ಕುಶಲತೆ ಮತ್ತು ಆತ್ಮವಿಶ್ವಾಸದಲ್ಲಿ ಅವರು ವಿವೇಕ್‌ಗಿಂತ ಕಡಿಮೆ ದಕ್ಷತೆಯನ್ನು ಹೊಂದಿದ್ದರು. ವಿವೇಕ್ ತನ್ನ ಕುಶಲತೆ ಮತ್ತು ಆತ್ಮವಿಶ್ವಾಸದಿಂದ ಕಛೇರಿಯ ಮುಖ್ಯಸ್ಥರ ನಂಬಿಕೆಯನ್ನು ಗಳಿಸಿದ್ದನು. ಯಾವುದೇ ಅಡೆತಡೆಗಳಿಲ್ಲದೆ ವಿವೇಕ್ ತನ್ನ ವೈಯಕ್ತಿಕ ಮತ್ತು ಔದ್ಯೋಗಿಕ ಜೀವನದಲ್ಲಿ ತೃಪ್ತಿಯಾಗಿದ್ದನು.

ಕೆಲವು ದಿನಗಳ ನಂತರ ಉನ್ನತ ಅಧಿಕಾರಿ ರಾಜೀನಾಮೆ ಕೊಟ್ಟು, ಕೆಲಸವನ್ನು ತೊರೆದರು. ಅವರು ವಿವೇಕ್‌ನ ದಕ್ಷತೆಯನ್ನು ಕಂಡು, ತಮ್ಮ ಕೆಲಸಕ್ಕೆ ತೊಂದರೆ ಆಗಬಹುದೆಂಬ ಕಾರಣದಿಂದ ಕೆಲಸವನ್ನು ಬಿಟ್ಟರು ಎಂಬ ವದಂತಿ ಹಬ್ಬಿತು. ಇದಕ್ಕೆ ಕಿವಿ ಕೊಡದೆ, ವಿವೇಕ್ ಇನ್ನೂ ಹೆಚ್ಚಿನ ಪರಿಶ್ರಮದಿಂದ ಕೆಲಸವನ್ನು ಮಾಡಲಾರಂಭಿಸಿದನು. ಇದರ ಪ್ರತಿಫಲವಾಗಿ ಕೆಲವೇ ತಿಂಗಳಲ್ಲಿ ಹುದ್ದೆಯ ಬಡ್ತಿಯೊಂದಿಗೆ ಸಂಬಳದ ಹೆಚ್ಚಳವನ್ನು ಸಹ ಗಳಿಸಿದನು.

> ***ಯಾವ ವಿಚಾರಗಳಲ್ಲಿ ನಾವು ನಮ್ಮನ್ನು ಇತರರೊಂದಿಗೆ ಹೋಲಿಸಬಾರದೋ ಅಂತಹ ಹೋಲಿಕೆಗಳೇ ಹೆಚ್ಚಾಗಿ ನಮ್ಮದಾಗಿರುತ್ತವೆ. ಆ ಹೋಲಿಕೆಗಳಿಂದಾಗಿ ನಮ್ಮಲ್ಲಿರುವುದರ ಬಗ್ಗೆ ಅಭಿಮಾನ ದೂರವಾಗಿ ಇತರರಲ್ಲಿ ಇರುವುದರ ಮೇಲೆ ಅಸೂಯೆ ಮೂಡುತ್ತದೆ. ಆ ಮನೋಭಾವ ನಮ್ಮಲ್ಲಿ ನಕಾರಾತ್ಮಕತೆಯನ್ನು ಹುಟ್ಟುಹಾಕಿ ನಮ್ಮಲ್ಲಿರುವುದನ್ನೂ ಕಳೆದುಕೊಳ್ಳುವಂತೆ ಮಾಡುತ್ತದೆ. ನಮ್ಮಲ್ಲಿರುವುದನ್ನು ಗುರುತಿಸಿ ಅಭಿನಂದಿಸಿದಾಗ ಸಕಾರಾತ್ಮಕತೆಯ ದೃಷ್ಟಿಕೋನ ಬೆಳೆದು ಇತರರಂತೆ ಬೆಳೆಯಲು ಸಹಕರಿಸಿ ಸಾಧನೆಯ ಹಾದಿಯನ್ನು ನಮ್ಮದಾಗಿಸುತ್ತದೆ.***

ಎಲ್ಲಾ ಸುಗಮವಾಗಿ ಹೋಗುತ್ತಿರುವಾಗ, ವಿವೇಕ್‌ಗೆ ಅವನ ಹಿಂದಿನ ಉನ್ನತ ಅಧಿಕಾರಿ ಒಂದು ಉನ್ನತ ಕಂಪನಿಯಲ್ಲಿ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ ಎಂಬ ಮಾಹಿತಿ ತಿಳಿಯಿತು. ಈ ವಿಷಯ ತಿಳಿಯುತ್ತಿದ್ದಂತೆ, ವಿವೇಕ್ ತುಂಬ ವ್ಯಾಕುಲತೆಗೆ ಒಳಗಾದನು. ತನಗಿಂತ ಅಸಮರ್ಥರಾಗಿದ್ದ ಅವರು ಹೇಗೆ ಉನ್ನತ ಹುದ್ದೆ ಪಡೆಯಲು ಸಾಧ್ಯವೆಂದು ಯೋಚಿಸತೊಡಗಿದನು. ಅವರಿಗಿಂತ ನಾನು ಉತ್ತಮವಾಗಿರುವಾಗ ನನಗೇಕೆ ಆ ಹುದ್ದೆ ಸಿಗಲಿಲ್ಲ? ನನ್ನ ಕಂಪನಿ ನನಗೆ

ಈ ಪುಸ್ತಕದ ಆಯ್ದ ಕೆಲವೇ ಕೆಲವು ಪುಟಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.
ಸಂಪೂರ್ಣ ಪುಸ್ತಕಕ್ಕಾಗಿ ಸಂಪರ್ಕಿಸಿ:

NIRUTA Publications

ನಿರುತ ಪಬ್ಲಿಕೇಷನ್ಸ್

#326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,
ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,
ಬೆಂಗಳೂರು-560056. ದೂ: 080-23213710, 8073067542
ಇಮೇಲ್: nirutapublications@gmail.com
www.nirutapublications.org

ಕಥನ – 16



ನಕಾರಾತ್ಮಕತೆಯಲ್ಲಿಯೂ ಸಕಾರಾತ್ಮಕತೆಯಿದೆ...

ಜೀವನದಲ್ಲಿ ಪ್ರತಿಯೊಂದು ಘಟನೆ ಉದ್ದೇಶವಿಲ್ಲದೆ ಉದ್ಭವಿಸುವುದಿಲ್ಲ. ಪ್ರತಿಯೊಂದು ಘಟನೆ ಜೀವನವನ್ನು ಕಟ್ಟಿಕೊಳ್ಳುವ ಅನೇಕ ಅವಕಾಶಗಳನ್ನು ನಮಗೆ ಕಲ್ಪಿಸುತ್ತದೆ. ಸಕಾರಾತ್ಮಕ ಮನೋಭಾವದಿಂದ ಮಾತ್ರ ಅಂತಹ ಅವಕಾಶಗಳನ್ನು ಗುರುತಿಸಲು ಸಾಧ್ಯ. ಅಂತಹ ಸಕಾರಾತ್ಮಕ ದೃಷ್ಟಿಕೋನ ನಮ್ಮದಾಗಬೇಕು.

ಆ ಗ್ರಾಮ ನಗರದಿಂದ ಸುಮಾರು 250 ಮೈಲುಗಳ ದೂರದ ಒಂದು ಪುಟ್ಟ ಗ್ರಾಮ. ಸಂಬಂಧಗಳಿಗೆ ಮತ್ತು ಮೌಲ್ಯಗಳಿಗೆ ಆದರ್ಶವಾಗಿ, ಸುತ್ತಮುತ್ತಲಿನ ಗ್ರಾಮಗಳಿಗೆ ಮಾದರಿಯಾಗಿತ್ತು. ಇಂತಹ ಗ್ರಾಮದಲ್ಲಿ ಗೆಳೆಯ ಸುಧಾಕರ ಸುಮಾರು ಹದಿನೈದು ವರುಷಗಳ ಹಿಂದೆ, ಸರ್ಕಾರಿ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ಓದುತ್ತಿದ್ದನು. ಸುಧಾಕರ ಕಡು ಬಡಕುಟುಂಬದಲ್ಲಿ ಹುಟ್ಟಿದ ಐದು ಜನ ಮಕ್ಕಳಲ್ಲಿ ಕಿರಿಯವನು. ಆ ಹೊತ್ತಿಗಾಗಲೇ ಕುಟುಂಬದ ಮೇಲೆ ಆರ್ಥಿಕ ಹೊರೆಯಿದ್ದಿದ್ದರಿಂದ ಮೂಲಭೂತ ಸೌಲಭ್ಯಗಳಿಂದ ವಂಚಿತನಾಗಿದ್ದನು. ಸಂಜೆಯ ಸಮಯದಲ್ಲಿ ಆ ಗ್ರಾಮದ ಸಾಹುಕಾರರ ಮನೆಯಲ್ಲಿ ಕೆಲಸ ಮಾಡಿ ಕುಟುಂಬಕ್ಕೆ ಹೊರೆಯಾಗದೆ ಜೀವನ ನಡೆಸುತ್ತಿದ್ದ ಸ್ವಾಭಿಮಾನಿ.

ಆ ದಿನ ಮಂಗಳವಾರ, ಸುಧಾಕರನ ತರಗತಿಯಲ್ಲಿ ಕನ್ನಡ ಉಪಾಧ್ಯಾಯರು 'ರಾಮಾಯಣದ ಪಾಠ' ಮಾಡಿದರು. ನಂತರ ಅವರು ಸುಧಾಕರನನ್ನು ಕರೆದು, ಪಾಠದ ಸಾರಾಂಶವನ್ನು ತರಗತಿಯಲ್ಲಿ ಮಂಡಿಸುವಂತೆ ತಿಳಿಸಿದರು. ಮುಜುಗರದಲ್ಲಿ ಸುಧಾಕರ, ಉಪಾಧ್ಯಾಯರ ಮಾತು ಕೇಳುತ್ತಿದ್ದಂತೆ ಎಷ್ಟೇ ಪ್ರಯತ್ನಪಟ್ಟರೂ ಒಂದು ಮಾತನ್ನು ಸಹ ಹೊರಹಾಕಲು ಸಾಧ್ಯವಾಗಲಿಲ್ಲ. ಹೇಳಲಾರದ ಪರಿಸ್ಥಿತಿಯಲ್ಲಿ ಮೌನವಾಗಿ ಉಪಾಧ್ಯಾಯರ ಮುಂದೆ ತಲೆಬಾಗಿ

ಕೈ ಕಟ್ಟಿ ನಿಂತನು. ಅದನ್ನು ನೋಡಿದ ಎಲ್ಲಾ ವಿದ್ಯಾರ್ಥಿಗಳು ಜೋರಾಗಿ ನಗುತ್ತಾ, ಸುಧಾಕರನನ್ನು ಹೀಯಾಳಿಸಲು ಶುರುಮಾಡಿದರು. ಇದರಿಂದ ಹೊರಹೋಗುತ್ತಿದ್ದ ಶಬ್ದ ಪಕ್ಕದ ತರಗತಿಯಲ್ಲಿನ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗುತ್ತಿದೆ ಎಂಬುದನ್ನು ಗ್ರಹಿಸಿದ ಉಪಾಧ್ಯಾಯರು ವಿದ್ಯಾರ್ಥಿಗಳ ಗಲಾಟೆಯನ್ನು ನಿಯಂತ್ರಿಸಿದರು.

ನಂತರ "ಲೋ ಸುಧಾಕರ ಮಾತನಾಡು, ಏನಾಗಿದೆ ನಿನಗೆ? ತರಗತಿಯಲ್ಲಿ ಪಾಠ ಕೇಳದೆ ನಿದ್ದೆ ಮಾಡುತ್ತಿದ್ದೀಯಾ?" ಎಂದು ಸುಧಾಕರನ ಮೇಲೆ ರೇಗಿದರು. ಅದು ಸುಧಾಕರನ ಮೇಲೆ ಪ್ರಭಾವ ಬೀರುವುದರಲ್ಲಿ ವಿಫಲವಾಯಿತು. ಇದರಿಂದ ಕೋಪಗೊಂಡ ಉಪಾಧ್ಯಾಯರು, ಸುಧಾಕರನನ್ನು ತರಗತಿಯ ಮೂಲೆಯಲ್ಲಿ ಮೊಣಕಾಲೂರಿ ಕುಳಿತುಕೊಳ್ಳುವಂತೆ ತಿಳಿಸಿದರು. ಮಾತನಾಡಲಾರದ ಸುಧಾಕರ, ಮಾತನಾಡುವುದಕ್ಕಿಂತ ಶಿಕ್ಷೆಯೇ ವಾಸಿಯೆಂದು ಗುರುಗಳ ಆದೇಶ ಪಾಲಿಸತೊಡಗಿದನು.

ತದನಂತರ, ಉಪಾಧ್ಯಾಯರು ಆ ತರಗತಿಯಲ್ಲಿನ ವಿದ್ಯಾರ್ಥಿನಿಯಾದ ಉಮಾಳನ್ನು ಕರೆದು ಪಾಠದ ಸಾರಾಂಶವನ್ನು ತರಗತಿಯಲ್ಲಿ ಮಂಡಿಸುವಂತೆ ತಿಳಿಸಿದರು. ಉಮಾ, ಸರಾಗವಾಗಿ ಮತ್ತು ಕ್ರಮಬದ್ಧವಾಗಿ ಮಧುರ ಧ್ವನಿಯಲ್ಲಿ ತರಗತಿಯಲ್ಲಿ ಪಾಠದ ಸಾರಾಂಶ ಒಪ್ಪಿಸಿದಳು. ಅದು ಮುಗಿಯುತ್ತಿದ್ದಂತೆ ಇಡೀ ತರಗತಿಯು ಉಪಾಧ್ಯಾಯರ ಸಮೇತವಾಗಿ ಚಪ್ಪಾಳೆಯ ಮೂಲಕ ಪ್ರಶಂಸೆಯನರ್ಪಿಸಿತು. ಮೊಣಕಾಲೂರಿ ಕುಳಿತಿದ್ದ ಸುಧಾಕರ ಇದಕ್ಕೆಲ್ಲಾ ಮೂಕ ಸಾಕ್ಷಿಯಾಗಿ ಕಣ್ಣುಗಳಿಂದಲೇ ಅವನ ಪ್ರಶಂಸೆಯನ್ನು ವ್ಯಕ್ತಪಡಿಸಿದನು.

ಚಪ್ಪಾಳೆ ಮುಗಿದ ನಂತರ, ಉಪಾಧ್ಯಾಯರು ಉಮಾಳನ್ನು ಕರೆದು "ಭೇಷ್ ಮಗು, ತುಂಬಾ ಅದ್ಭುತವಾಗಿ ಹೇಳಿದೆ," ಎನ್ನುತ್ತಾ ಬೆನ್ನು ತಟ್ಟಿದರು. ಹಾಗೆಯೇ ಸುಧಾಕರನ ಕಡೆ ನೋಡುತ್ತಾ, "ಬಾ ಇಲ್ಲಿ" ಎನ್ನುತ್ತಿದ್ದಂತೆ ಸುಧಾಕರ ಭಯದಿಂದ ಎದ್ದು ಬಂದು ಅವರ ಮುಂದೆ ನಿಂತನು. ಆಗ ಆ ಉಪಾಧ್ಯಾಯರು ಉಮಾಳನ್ನು ಸುಧಾಕರನ ಕೆನ್ನೆಗೆ ಒಂದು ಬಾರಿಸುವಂತೆ ಹೇಳಿದರು. ಉಮಾ, ಗುರುಗಳ ಆದೇಶದಂತೆ ಸುಧಾಕರನ ಕೆನ್ನೆಗೆ ಹೊಡೆದ ಶಬ್ದ ಕೆಲ ಕ್ಷಣಗಳ ಕಾಲ ತರಗತಿಯಲ್ಲಿ ಪ್ರತಿಧ್ವನಿಗೊಂಡಿದ್ದು ಆ ವಿದ್ಯಾರ್ಥಿಗಳ ನಗುವಿನಲ್ಲಿ ಕೇಳಿಸದೆ ಹೋಯಿತು.

ಈ ಪುಸ್ತಕದ ಆಯ್ದ ಕೆಲವೇ ಕೆಲವು ಪುಟಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಸಂಪೂರ್ಣ ಪುಸ್ತಕಕ್ಕಾಗಿ ಸಂಪರ್ಕಿಸಿ:

ನಿರುತ ಪಬ್ಲಿಕೇಷನ್ಸ್

#326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,
ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,
ಬೆಂಗಳೂರು-560056. ದೂ: 080-23213710, 8073067542

ಇಮೇಲ್: nirutapublications@gmail.com

www.nirutapublications.org

ಬದಲಾವಣೆ ಬದಲಾಯಿಸಬಲ್ಲದು...

ಇತರರನ್ನು ಸೋಲಿಸಿ ಅಥವಾ ಭಯಪಡಿಸಿ ಬಲವಂತದ ತೆಕ್ಕೆಯಲ್ಲಿ ಬಂಧಿಸುವುದು ನಿಶ್ಶಕ್ತ ಮನೋಭಾವದವರ ಕಾರ್ಯ.

ಇತರರನ್ನು ಗೆಲ್ಲಿಸಿ ಮತ್ತು ಪ್ರೀತಿಸುವಂತೆ ಮಾಡಿ, ವಿಶ್ವಾಸದ ತೆಕ್ಕೆಯಲ್ಲಿ ತಾನಾಗಿಯೇ ಬಂಧಿಯಾಗುವಂತೆ ಮಾಡುವುದು ಅಸಾಮಾನ್ಯರ ಕಾಯಕ. ಆ ಅಸಾಮಾನ್ಯರು ನಾವಾಗುವಂತೆ ಶ್ರಮಿಸಬೇಕು.

ವ್ಯಕ್ತಿಗಳ ನಡುವೆ ಅನ್ಯೋನ್ಯತೆ ಮತ್ತು ಪ್ರಬುದ್ಧತೆ ಬೆಳೆಯುವುದು ಆ ವ್ಯಕ್ತಿಗಳಲ್ಲಿನ ಹೊಂದಾಣಿಕೆಯ ಗುಣ, ಮಾತು, ವರ್ತನೆ ಮತ್ತು ಸಭ್ಯತೆಯಿಂದ ಎಂಬುದು ನಮ್ಮೆಲ್ಲರಿಗೂ ತಿಳಿದಿರುವ ಸಾಮಾನ್ಯ ವಿಷಯ. ಅಂತಹ ಸಾಮಾನ್ಯ ವಿಷಯವನ್ನು ನಾವು ವಿಷಯಾಧಾರಿತವಾಗಿ ಅರ್ಥಮಾಡಿಕೊಂಡು ಅನುಸರಣೆ ಮಾಡಲಾಗದೆ ಸಂಬಂಧಗಳನ್ನು ಸಂಪಾದಿಸಿ, ಕಾಪಾಡಿಕೊಳ್ಳುವುದರಲ್ಲಿ ವಿಫಲವಾಗುತ್ತೇವೆ. ವ್ಯಕ್ತಿಗಳಲ್ಲಿನ ನ್ಯೂನತೆಗಳನ್ನು ಸೂಕ್ಷ್ಮದರ್ಶಕದ ದೃಷ್ಟಿಕೋನದಲ್ಲಿ ಹುಡುಕುತ್ತಾ ಸಣ್ಣ ವಿಚಾರಗಳನ್ನೂ ದೊಡ್ಡದಾಗಿಸಿ ಸಂಬಂಧಗಳಲ್ಲಿ ಬಿರುಕು ತರಬಲ್ಲ ನಿಸ್ಸೀಮರು. ವ್ಯಕ್ತಿಗಳನ್ನು ಸರಿಯಾಗಿ ನಿಭಾಯಿಸಿದಾಗ ಮಾತ್ರ ಸಂಬಂಧಗಳು ಗಟ್ಟಿಯಾಗಬಲ್ಲವು ಎಂಬುದಕ್ಕೆ ನನ್ನ ಗೆಳೆಯ ಮಹೇಶನ ಜೀವನ ಒಂದು ಉತ್ತಮ ನಿದರ್ಶನ.

ಮಹೇಶ ಒಂದು ಸಾಫ್ಟ್‌ವೇರ್ ಕಂಪನಿಯಲ್ಲಿ ಪ್ರೋಗ್ರಾಮರ್ ಆಗಿ ಸುಮಾರು 5 ವರ್ಷಗಳಿಂದ ಕೆಲಸ ಮಾಡುತ್ತಿದ್ದನು. ಇತ್ತೀಚೆಗೆ ಮದುವೆಯಾದನು. ಅವನ ಹೆಂಡತಿ ಹಳ್ಳಿಯಿಂದ ಬಂದಂತಹ ಸಂಪ್ರದಾಯಸ್ಥ ಹೆಣ್ಣು ಮಗಳು. ಪ್ರೀತಿ–ವಾತ್ಸಲ್ಯಗಳಿಗೆ ಹೆಚ್ಚಿನ ಬೆಲೆ ಕೊಡುವ ಆ ಹೆಣ್ಣು ಮಗಳು ಅದನ್ನೇ ತನ್ನ ಗಂಡನಿಂದ ಸಿಗುವ ಅಪೂರ್ವವಾದ ಕಾಣಿಕೆಯೆಂದು ತಿಳಿದಿದ್ದವಳು. ಆ ಮುಗ್ಧತೆಯನ್ನು ಕಂಡ ನಮಗೆ ಕೆಲವು ಸಲ ಅದು ಅತಿಯೆನಿಸಿದರೂ, ನಾವು ಅವಳ ಮುಂದೆ ನಗಣ್ಯರು ಎಂಬುದು ಸತ್ಯವಾಗಿತ್ತು.

ಆ ಒಂದು ದಿನ ಮಹೇಶ ಕಛೇರಿಯಿಂದ ತುಂಬಾ ಸುಸ್ತಾಗಿ ಮನೆಗೆ ತಲುಪಿದನು. ತನ್ನ ಶೂಗಳನ್ನು ಮತ್ತು ಕಛೇರಿಯ ಬ್ಯಾಗನ್ನು ಎಸೆದು, ಹೆಂಡತಿಗೆ "ಲೇ, ಒಂದು ಟೀ ಕೊಡು" ಎನ್ನುತ್ತಾ ಸೋಫಾದ ಮೇಲೆ ಕುಳಿತುಕೊಂಡು ತಲೆಯನ್ನು ಮೇಲೆತ್ತಿ ಹಿಂದಕ್ಕೆ ಬಾಗಿ ಸುಧಾರಿಸಿಕೊಳ್ಳತೊಡಗಿದನು. ಅದನ್ನು ಗಮನಿಸಿದ ಆ ಹೆಣ್ಣು ಮಗಳು ಏನೂ ಮಾತನಾಡದೆ ಕೆಲ ನಿಮಿಷಗಳಲ್ಲಿಯೇ 'ಟೀ' ಅನ್ನು

ಕೊಟ್ಟು, ಹೇಗಿತ್ತು ಈ ದಿನ? ಎಂದು ವಿಚಾರಿಸುತ್ತಿದಂತೆ, ಗೆಳೆಯ "ಲೇ ಇದೇನು ಟೀನಾ? ಸಕ್ಕರೆಯಿಲ್ಲದೆ ಕುಡಿಯುವುದಕ್ಕೆ ನನಗೇನು ರೋಗನಾ? ಬೆಳಿಗ್ಗೆಯಿಂದ ಮನೆಯಲ್ಲಿ ಬಿದ್ದಿರುವ ನಿನಗೇನು ಗೊತ್ತು ನನ್ನ ಕಷ್ಟ," ಎಂದು ಚೀರುತ್ತಾ ಟೀ ಕಪ್ ಅನ್ನು ನೆಲದ ಮೇಲೆ ಜೋರಾಗಿ ಎಸೆದನು. ಆ ಚೀರಾಟಕ್ಕೆ ಆ ಮುಗ್ಧ ಹೆಣ್ಣು ಮಗಳು ಭಯಭೀತಳಾಗಿ ಕಣ್ಣೀರಿಡುತ್ತಾ ತನ್ನ ಕೊಠಡಿಯನ್ನು ಸೇರಿಕೊಂಡಳು. ಮರುದಿನ ಮುಂಜಾನೆ ಮಹೇಶ ಕಛೇರಿಗೆ ಹೋಗುವಾಗಲೂ ಅಳುತ್ತಿದ್ದುದು ಅವಳ ಮನಸ್ಸಿಗೆ ಆದ ನೋವಿನ ಆಘಾತವನ್ನು ಅವನಿಗೆ ತಿಳಿಯಪಡಿಸುವಲ್ಲಿ ವಿಫಲವಾಗಿತ್ತು.

ಆ ದಿನ ಸಂಜೆ ಕಛೇರಿಯಿಂದ ಮನೆಗೆ ಹೊರಟ ಮಹೇಶ ಪ್ರತಿದಿನ ಬಾಗಿಲಿನಲ್ಲಿ ತನಗಾಗಿ ಕಾಯುತ್ತಿದ್ದ ಹೆಂಡತಿ ಇಲ್ಲದಿರುವುದನ್ನು ಕಂಡು ಅಚ್ಚರಿಗೊಂಡರೂ, ಯಾವುದೇ ಭಾವೋದ್ವೇಗಕ್ಕೆ ಒಳಗಾಗದೆ ಮತ್ತೊಂದು ಕೊಠಡಿಗೆ ಹೋಗಿ ತನ್ನ ಕೆಲಸದಲ್ಲಿ ಮಗ್ನನಾದನು. ಆ ಹೆಣ್ಣು ಮಗಳು ನಡೆದ ವಿಚಾರವನ್ನು ಮರೆತು ಗಂಡನಿಗಾಗಿ ಅಡುಗೆ ಮಾಡಿ ಅವನನ್ನು ಪ್ರೀತಿಯಿಂದ ಊಟಕ್ಕೆ ಕರೆದಾಗಲೂ ಅವನು ಅಕ್ಕರೆಯಿಂದ ಸ್ಪಂದಿಸದೆ ತನ್ನ ಅಹಂನ ದರ್ಪವನ್ನು ಪ್ರದರ್ಶಿಸಿದನು. ಹೀಗೆ ಅವರಿಬ್ಬರ ನಡುವೆ ಶುರುವಾದ ಅಂತರ, ದಿನೇ–ದಿನೇ ಮಹೇಶನ ವರ್ತನೆಯಿಂದ ಬೆಳೆದು ದೊಡ್ಡದಾಯಿತು. ಆ ಹೆಣ್ಣು ಮಗಳು ಎಷ್ಟೇ ಪ್ರಯತ್ನ ಪಟ್ಟರೂ ಮಹೇಶ ಸ್ಪಂದಿಸಲು ಮುಂದಾಗಲೇ ಇಲ್ಲ. ಹಾಗಾಗಿ ಅವಳ ಉಜ್ವಲ ಭವಿಷ್ಯದ ಕನಸಿನ ದ್ವಾರಗಳು ಮುಚ್ಚಿಹೋಗುತ್ತಿದ್ದವು.

ಹೀಗೆ ದಿನಗಳು ಕಳೆದಂತೆ ಒಂದು ದಿನ ಮಹೇಶ ಕಛೇರಿಯಲ್ಲಿ ತನ್ನ ಗೆಳೆಯರೊಂದಿಗೆ ತಾನು ತನ್ನ ಮಡದಿಯನ್ನು ತುಂಬಾ ಕಟ್ಟು–ನಿಟ್ಟಿನಲ್ಲಿ ಇಟ್ಟಿರುವುದಾಗಿ ಜಂಭ ಕೊಚ್ಚಿಕೊಳ್ಳುತ್ತಿದ್ದನು. ಅದನ್ನು ಕೇಳಿದ ನಾನು ಆಶ್ಚರ್ಯದಿಂದ "ಯಾವ ರೀತಿಯ ಕಟ್ಟು–ನಿಟ್ಟು ನನಗೂ ತಿಳಿಸು" ಎಂದು ಕೇಳಿದಾಗ, ಅವನು ಹೆಮ್ಮೆಯಿಂದ 'ಟೀ ವಿಚಾರವನ್ನು' ವಿವರಿಸಿದ.

ಕಥನ – 25

ಗುರುಗಳಿಗೆ ಅರ್ಪಣೆ...

ಗೆಳೆಯ, ತನ್ನ ಪ್ರಕಾಶನದ ಮೂಲಕ ಹೊರತಂದ 67 ನೇ ಪುಸ್ತಕ. ನಾನು ಓದಿ ಅಭಿಪ್ರಾಯ ಕೊಡಲೆಂದು ನನಗೆ ಉಡುಗೊರೆಯಾಗಿ ನೀಡಿದ್ದು. ಪುಸ್ತಕ ತೆಗೆಯುತ್ತಿದ್ದಂತೆ ಎರಡನೇ ಪುಟದಲ್ಲಿ ಈ ರೀತಿ ಮುದ್ರಿಸಲಾಗಿತ್ತು.

"ಭಾರತದ ಪ್ರಸಿದ್ಧ ಸಮಾಜ ಶಾಸ್ತ್ರಜ್ಞರು, ಪ್ರಖ್ಯಾತ ಸಮಾಜ ಕಾರ್ಯ ಪ್ರಶಿಕ್ಷಣಾರ್ಥಿಗಳೂ, ಆಂಗ್ಲ ಮತ್ತು ಕನ್ನಡದಲ್ಲಿ ಸಮಾಜ ಕಾರ್ಯ ಸಾಹಿತ್ಯವನ್ನು ಸೃಷ್ಟಿಸಿದವರೂ ಮತ್ತು ನನ್ನ ಮಾರ್ಗದರ್ಶಕರೂ ಆಗಿರುವ ಪ್ರೊ.ಎಚ್.ಎಂ.ಮರುಳಸಿದ್ದಯ್ಯ ಅವರಿಗೆ ಅರ್ಪಣೆ.

–ಡಾ. ಸಿ. ಆರ್.ಗೋಪಾಲ್"

ನಮ್ಮಲ್ಲಿನ ಜ್ಞಾನ ಗುರುವಿಲ್ಲದೆ ವೃದ್ಧಿಯಾಗುತ್ತಿರಲಿಲ್ಲ. ನಮ್ಮನ್ನು, ನಾವು ಅರ್ಥಮಾಡಿಕೊಳ್ಳುವುದರಿಂದ ಹಿಡಿದು, ಇಂದಿನ ನಮ್ಮ ಆಲೋಚನಾ ಶಕ್ತಿಗೆ ಭದ್ರಬುನಾದಿ ಹಾಕಿದವರು ಗುರುಗಳು. ಸ್ವಾರ್ಥಭರಿತ ಉದ್ದೇಶಗಳಿಲ್ಲದೆ ನಮ್ಮ ಜೀವನವನ್ನು ರೂಪಿಸಲು ಶ್ರಮಿಸಿದ ಆ ಗುರುಗಳ ಸ್ಮರಣೆ ನಮ್ಮ ಆದ್ಯ ಕರ್ತವ್ಯ. ಆ ಗುರುಗಳನ್ನು, ನೆನೆಯುತ್ತಾ, ಅವರು ಕಲಿಸಿದ ಆದರ್ಶಗಳನ್ನು ಪಾಲಿಸಲು ಮುಂದಾದರೇ ನಮ್ಮ ಜ್ಞಾನ ಮತ್ತಷ್ಟು ಬೆಳೆಯುತ್ತಾ, ಇತರರಿಗೆ ದಾರಿದೀಪವಾಗಬಲ್ಲದು.

ಪ್ರೊ.ಎಚ್.ಎಂ.ಮರುಳಸಿದ್ದಯ್ಯನವರು ಸಮಾಜಕಾರ್ಯದ ಮೇರು ಪರ್ವತ. ಸಾವಿರಾರು ವಿದ್ಯಾರ್ಥಿಗಳಿಗೆ ಸಮಾಜಕಾರ್ಯ ಶಿಕ್ಷಣದ ಮೂಲಕ ಜೀವನ ರೂಪಿಸಿ ಸಮಾಜಮುಖಿಗಳಾಗಲು ದೀಕ್ಷೆ ನೀಡಿದ ಗುರುಗಳು. ಸಮಾಜದಲ್ಲಿ ಸಮಾಜಕಾರ್ಯಕ್ಕೆ ತಮ್ಮ ಕೆಲಸ ಮತ್ತು ಅಮೂಲ್ಯ ಸಾಹಿತ್ಯದ ಮೂಲಕ ಒಂದು ಭದ್ರವಾದ ಬುನಾದಿಯನ್ನು ಕಲ್ಪಿಸುತ್ತಾ, ಕಳೆದು ಹೋಗುತ್ತಿದ್ದ

ಸಮಾಜದಲ್ಲಿ ಸಮಾಜಕಾರ್ಯ ವೃತ್ತಿಪರರಿಗೆ ಹೊಸ ಆಯಾಮ ಕಲ್ಪಿಸಿದ ಸಹೃದಯ ಧೀಮಂತ. ಇಂತಹ ಪರಿಪೂರ್ಣ ಶಿಕ್ಷಕರ ಮಾರ್ಗದರ್ಶನದಲ್ಲಿ ಡಾ. ಸಿ.ಆರ್. ಗೋಪಾಲ್ 2002 ರಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದವರು. ಕೆಲ ವರುಷಗಳ ಹಿಂದೆಯಷ್ಟೇ ಸಹಾಯಕ ಪ್ರಧಾನ ವ್ಯವಸ್ಥಾಪಕರಾಗಿ 'ದಿ ಸೊಂಡೂರು ಮ್ಯಾಂಗನೀಸ್ ಅಂಡ್ ಐರನ್ ಓರ್ಸ್ (ಲಿ)' ಗಣಿ ಕಂಪನಿಯಲ್ಲಿ 33 ವರ್ಷಗಳ ಸೇವೆಯನ್ನು ಸಲ್ಲಿಸಿ ನಿವೃತ್ತಿಯಾದ ನಂತರ ತಮ್ಮನ್ನು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿಸಿಕೊಂಡವರು.

ಈ ಪುಸ್ತಕವನ್ನು ದಿನಾಂಕ 02-09-2018 ರಂದು ಲೋಕಾರ್ಪಣೆ ಮಾಡಬೇಕೆಂದು ಕಾರ್ಯಕ್ರಮದ ತಯಾರಿ ಮಾಡಲಾಗಿತ್ತು. ತಮ್ಮ ಈ ಪುಸ್ತಕವನ್ನು ತಮ್ಮ ಪ್ರೀತಿಯ ಗುರುಗಳಿಗೆ ತೋರಿಸಿ, ಅವರ ಆಶೀರ್ವಾದ ಪಡೆಯಬೇಕೆಂದು ಡಾ. ಸಿ.ಆರ್.ಗೋಪಾಲ್‌ರವರು ಹಿಂದಿನ ದಿನವೇ ಬಳ್ಳಾರಿಯಿಂದ ಬೆಂಗಳೂರಿಗೆ ಬಂದಿದ್ದರು.

ಗೋಪಾಲ್ ಅವರ ಇಚ್ಛೆಯ ಮೇರೆಗೆ ಗೆಳೆಯ ರಮೇಶ್ ಶನಿವಾರ ಸಂಜೆ ಗುರುಗಳನ್ನು ಭೇಟಿ ಮಾಡಿಸಲು ಹೊರಡುವಾಗ ನನ್ನನ್ನೂ ಜೊತೆಗೂಡುವಂತೆ ಹೇಳಿದ. ಇಲ್ಲವೆನ್ನಲಾಗದೇ ಜೊತೆಯಾದೆ. ಅವರ ಜೊತೆ ಪ್ರಯಾಣಿಸುತ್ತಿದ್ದಾಗ ತಿಳಿಯಿತು, ಪ್ರೊ. ಎಚ್.ಎಂ. ಮರುಳಸಿದ್ದಯ್ಯರವರು ದೀರ್ಘವಾದ ಅನಾರೋಗ್ಯದ ಕಾರಣ ಜಯನಗರದ ಒಂದು ಆಸ್ಪತ್ರೆಯಲ್ಲಿ ಐಸಿಯು ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ, ಎಂಬ ಸಂಗತಿ.

ಐಸಿಯು ನ ಭೇಟಿ ಸಂಜೆ 6 ಗಂಟೆಯೆಂದು ತಿಳಿದು ಆಸ್ಪತ್ರೆಯನ್ನು ತಲುಪಿದಾಗ ಭೇಟಿಯ ಸಮಯ ಆರಂಭವಾಗಿತ್ತು. ಅಲ್ಲಿಗೆ ತಲುಪುತ್ತಿದ್ದಂತೆ ಅದುವರೆಗೂ ನಮ್ಮ ಜೊತೆ ಮಾತನಾಡುತ್ತಿದ್ದ ಗೋಪಾಲ್‌ರವರು ಭಾವುಕರಾಗಿದ್ದರು. ಅವರ ಮುಖದಲ್ಲಿ ದುಃಖದ ಛಾಯೆ ಮೂಡಿತ್ತು. ತಮ್ಮ ಆ ಭಾವುಕತೆಯನ್ನು ಅದುಮಿಟ್ಟುಕೊಂಡ ಅವರು ಗೆಳೆಯ ರಮೇಶ್ ಅವರಿಗೆ ತಮ್ಮ ಪುಸ್ತಕದ ಎರಡು ಪ್ರತಿಗಳನ್ನು ತೆಗೆದುಕೊಳ್ಳುವಂತೆ ಆಂಗಿಕವಾಗಿ ಸೂಚಿಸುತ್ತಿದ್ದಂತೆ ಆ ಕೆಲಸವನ್ನು ನಾನು ಮಾಡಿದ್ದೆ.

ಆಸ್ಪತ್ರೆಯ ಬಾಗಿಲಿನಲ್ಲಿ ನಮಗಾಗಿ ಮರುಳಸಿದ್ದಯ್ಯನವರ ಮಗ ಕಾಯುತ್ತಿದ್ದರು. ನಮ್ಮನ್ನು ಬರಮಾಡಿಕೊಂಡು ಐಸಿಯು ವಾರ್ಡ್ ಕಡೆ ಕರೆದೊಯ್ದರು. ಆ 200 ಮೀಟರ್ ನ ಐಸಿಯು ವಾರ್ಡ್‌ನ ಕಡೆಯ ನಡೆ ಗೋಪಾಲ್‌ರವರಿಗೆ 200 ಕಿ.ಮೀ ಗಳ ನಡಿಗೆಯಾಗಿದ್ದದ್ದು ಅವರು ಇಡುತ್ತಿದ್ದ ಪ್ರತಿಯೊಂದು ಹೆಜ್ಜೆಯಿಂದ ಗೋಚರವಾಗುತ್ತಿತ್ತು.

ನಾವು ನಾಲ್ಕು ಜನ ಇದ್ದಿದ್ದನ್ನು ಕಂಡ ಆ ಐಸಿಯು ವಾರ್ಡ್‌ನ ನರ್ಸ್ ಕೇವಲ ಇಬ್ಬರಿಗೆ ಮಾತ್ರ ಪ್ರವೇಶವೆಂದರು. ಆದರೆ, ಗೋಪಾಲ್‌ರವರನ್ನು ಕಂಡು ನಾಲ್ಕು ಜನರನ್ನು ವಾರ್ಡ್‌ನ ಒಳಗೆ ಬಿಟ್ಟರು. ಕೇವಲ 05 ನಿಮಿಷಗಳಲ್ಲಿ ಹೊರಬರುವಂತೆ ಮನವಿ ಮಾಡಿದರು. ಒಳಹೋಗುತ್ತಿದ್ದಂತೆ, ಅಲ್ಲಿನ ಒಂದು ಹಾಸಿಗೆಯ ಮೇಲೆ ಆ ಗುರುಗಳು ಮಲಗಿದ್ದರು. ಚಿಕಿತ್ಸೆಯ ಹೆಸರಿನಲ್ಲಿ ಅವರ ಮೈಯೆಲ್ಲಾ ಯಂತ್ರಗಳ ಕೊಂಡಿಗಳನ್ನು ಜೋಡಿಸಲಾಗಿತ್ತು. ಹಸಿರು ಬಣ್ಣದ ಚಾದರವೊಂದು ಅವರ ದೇಹವನ್ನು ಮರೆಮಾಡಿತ್ತು. ಎಡಗಡೆಗೆ ವಾಲಿದ್ದ ಅವರ ಮುಖ ಮಾತ್ರ ನಮಗೆ ಸಣ್ಣದಾಗಿ ಕಾಣುತ್ತಿತ್ತು.

ಇದುವರೆಗೂ ನಾವು ನೋಡದ ಸ್ಥಿತಿಯಲ್ಲಿ ಆ ಗುರುಗಳನ್ನು ಕಂಡ ನಾವೆಲ್ಲಾ ದುಃಖಿತರಾದೆವು ಎಂಬುವುದಕ್ಕೆ ನಮ್ಮ ಕಣ್ಣಂಚಿನ ಹನಿಗಳು ಸಾಕ್ಷಿಯಾಗಿದ್ದವು.

ಹಾಸಿಗೆಯ ಎಡಭಾಗದಲ್ಲಿ ಮುಖದ ಬಳಿ ಹೋಗಿ ನಿಂತ ಗೋಪಾಲರು, ಸಣ್ಣ ಧ್ವನಿಯಲ್ಲಿ "ಗುರುಗಳೇ, ನಾನು ಗೋಪಾಲ್" ಎಂದು ಎರಡು ಸಲ ಉಚ್ಚರಿಸಿದರು. ನಿಧಾನವಾಗಿ, ಕಣ್ಣು ಬಿಟ್ಟ ಮರುಳಸಿದ್ದಯ್ಯರವರಿಗೆ ಗೋಪಾಲ್ ಯಾರೆಂದು ತಿಳಿಯಲಿಲ್ಲ. ಅಲ್ಲೇ ನಿಂತಿದ್ದ ಮಗನಿಗೆ ಹಾಸಿಗೆಯನ್ನು ಸ್ವಲ್ಪ ಮೇಲಕ್ಕೆ ಎತ್ತುವಂತೆ ಮೌಖಿಕವಾಗಿ ಸೂಚಿಸಿದರು. ಅದರಂತೆ, ಆ ಆಸ್ಪತ್ರೆಯ ನರ್ಸ್ ಮುಖಭಾಗದ ಹಾಸಿಗೆಯನ್ನು ಸ್ವಲ್ಪ ಮೇಲಕ್ಕೆ ಎತ್ತಿದ್ದರು. ಆಗ ಮಗ ಅವರ ಕಿವಿಯಲ್ಲಿ "ನಿಮ್ಮ ಶಿಷ್ಯ ಗೋಪಾಲ್," ಬಂದಿದ್ದಾರೆ ಎಂದರು. ಅದನ್ನು ಕೇಳಿಸಿಕೊಂಡ ಅವರು ಗೋಪಾಲ್ ಕಡೆ ಮುಖ ಮಾಡಿದಾಗ ಅವರು ನನ್ನ ಕೈಯಲ್ಲಿದ್ದ ಪುಸ್ತಕವನ್ನು ತೆಗೆದುಕೊಂಡು ಎರಡನೇಯ ಪುಟವನ್ನು ತಮ್ಮ ಗುರುಗಳಿಗೆ ತೋರಿಸುತ್ತಾ, ಅಲ್ಲಿನ ವಾಕ್ಯಗಳನ್ನು ಓದಿ ಹೇಳುತ್ತಾ 'ಈ ಪುಸ್ತಕ ತಮಗೆ ಅರ್ಪಣೆ' ಎಂದರು.

ಅದನ್ನು ನೋಡುತ್ತಿದ್ದಂತೆ ಮರುಳಸಿದ್ದಯ್ಯರವರು ಆ ವಾಕ್ಯಗಳನ್ನು ತೊದಲುತ್ತಾ, ಒಂದೊಂದಾಗಿ ಮಗುವಂತೆ ಓದಲು ಪ್ರಾರಂಭಿಸಿದರು. ಸಾವಿರಾರು ಶಿಷ್ಯರಿಗೆ ಓದಲು ಕಲಿಸಿದ ಗುರುಗಳು, ಓದುವುದಕ್ಕೆ ಕಷ್ಟ ಪಡುತ್ತಿದ್ದುದನ್ನು ಕಂಡ ಗೋಪಾಲ್ ಇದುವರೆಗೆ ತಡೆದಿಟ್ಟುಕೊಂಡಿದ್ದ ತಮ್ಮ ಕಣ್ಣೀರನ್ನು ತಡೆಯಲಾಗಲಿಲ್ಲ. ಅವು

ತಾನಾಗಿಯೇ ಅರಿವಿಲ್ಲದೆ ಹೊರಬರುತ್ತಿದ್ದಂತೆ ಆ ಗುರುಗಳ ಹಸ್ತದ ಮೇಲೆ ಮುಖಮಾಡಿ ವಾಲಿದರು.

ಗೆಳೆಯ ರಮೇಶ ಅವರನ್ನು ಸಾಂತ್ವನ ಮಾಡುತ್ತಿದ್ದಂತೆ, ಅಲ್ಲಿನ ನರ್ಸ್ ನಮ್ಮ ಸಮಯ ಮುಗಿದಿರುವುದರ ನೆನಪು ಮಾಡಿಸಿದರು. ಬಲವಂತದಿಂದ ಹೊರನಡೆದ ಗೋಪಾಲ್ ಅವರು ತಮ್ಮ ಪುಸ್ತಕವನ್ನು ಆ ಗುರುಗಳ ಪಾದದಡಿಯಿಟ್ಟು, ನಮನ ಮಾಡಿ ಹೊರನಡೆದಾಗ ಶಿಷ್ಯನಿಗೆ ಆ ಗುರುಗಳ ಮೇಲಿನ ಪ್ರೀತಿಯ ಗಾಢತೆಯ ಅರಿವಾಯಿತು. ಆ ಗುಂಗಿನಲ್ಲಿ ಆಸ್ಪತ್ರೆಯಿಂದ ಹೊರನಡೆಯುತ್ತಿದ್ದಾಗ, ಆ ಶಿಷ್ಯನ ಗುರುಗಳ ಆರಾಧನೆ ಮನದಲ್ಲಿ ನನ್ನ ಗುರುಗಳನ್ನು ನೆನಪಿಸುತ್ತಾ, ಅವರನ್ನು ಒಮ್ಮೆ ಭೇಟಿಯಾಗಿ ನಮನಗಳನ್ನು ಸಲ್ಲಿಸುವಂತೆ ಪ್ರೇರೇಪಿಸಿತ್ತು.

ಚಿಂತನ–ಮಂಥನ

1. ನಮ್ಮ ಗುರುಗಳು ನಮ್ಮನ್ನು ಕಂಡು ಹೆಮ್ಮೆಯಿಂದ 'ನೆಚ್ಚಿನ ಶಿಷ್ಯರೆಂದು' ಹೇಳಬಲ್ಲರೇ?
2. ನಾವು ಗುರುಗಳಾದರೆ, ನಾವೆಂತಹ ಶಿಷ್ಯರನ್ನು ಬಯಸುತ್ತೇವೆ?

ಈ ಪುಸ್ತಕದ ಆಯ್ದ ಕೆಲವೇ ಕೆಲವು ಪುಟಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಸಂಪೂರ್ಣ ಪುಸ್ತಕಕ್ಕಾಗಿ ಸಂಪರ್ಕಿಸಿ:

NIRUTA Publications

ನಿರುತ ಪಬ್ಲಿಕೇಷನ್ಸ್

#326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,

ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,

ಬೆಂಗಳೂರು-560056. ದೂ: 080-23213710, 8073067542

ಇಮೇಲ್: nirutapublications@gmail.com

www.nirutapublications.org

ಗುರುಗಳ ನಲ್ನುಡಿಗಳು

ಪ್ರಪಂಚದಲ್ಲಿ, ಅತ್ಯಂತ ಬಲವಾದ ಆಯುಧ ಆಹಾರ.

ಅದನ್ನು ಎಚ್ಚರಿಕೆಯಿಂದ ಬಳಸಿ.

ಡಾ. ಸಿ.ಆರ್ ಗೋಪಾಲ್
ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕರು
ದಿ ಸೊಂಡೂರು ಮ್ಯಾಂಗನೀಸ್ ಅಂಡ್ ಐರನ್ ಓರ್ಸ್ (ಲಿ)., ಬಳ್ಳಾರಿ

ನಮ್ಮ ಯುವ ಮಿತ್ರ ಶ್ರೀ ಶೇಖರ್ ಅವರ 'ಬದುಕು ಬದಲಾಯಿಸಿದ ಕಥನಗಳು' ಕಥಾ ಸಂಕಲನವನ್ನು ತುಂಬಾ ಆಸಕ್ತಿಯಿಂದ ಓದಿದ್ದೇನೆ. ಈ ಕಥಾ ಸಂಕಲನದಲ್ಲಿ ಗೆಳೆಯ ಶೇಖರ್ ಅವರು ತಮ್ಮ ಜೀವನದಲ್ಲಿ ಕಂಡದ್ದನ್ನು, ಅನುಭವಿಸಿದ್ದನ್ನು ಕಥಾ ಪ್ರಸಂಗಗಳೆಂದು ಪರಿಗಣಿಸಿ ಕಥೆಗಳನ್ನು ಹೆಣೆದಿದ್ದಾರೆ. ಹಾಗಾಗಿ ಇಲ್ಲಿನ ಕಥೆಗಳು ಅನುಭವ ನಿರೂಪಣೆ–ಸ್ವಗತ ಮಾದರಿಗಳಲ್ಲಿವೆ.

ಸ್ನೇಹಿತ ಶೇಖರ್ ಕನ್ನಡ ನಾಡಿನ ಗ್ರಾಮೀಣ ಪರಿಸರದಲ್ಲಿ ಬೆಳೆದವರು. ಪ್ರೀತಿ, ವಾತ್ಸಲ್ಯ, ಪರಸ್ಪರಾವಲಂಬನೆ, ಸಂಬಂಧಗಳ ಮಹತ್ವ, ಸರಳ ಜೀವನ, ನೇರ ನಡೆನುಡಿ, ಪರಿಸರದ ಬಗ್ಗೆ ಕಾಳಜಿ ಮುಂತಾದ ಗ್ರಾಮೀಣ ಮೌಲ್ಯಗಳನ್ನು ಆವಾಹಿಸಿಕೊಂಡು ಬೆಳೆದವರು. ತಮ್ಮ ವಿದ್ಯಾಭ್ಯಾಸಕ್ಕಾಗಿ ಹಾಗೂ ಅನಂತರದ ವೃತ್ತಿಗಾಗಿ ಬೆಂಗಳೂರಿನಲ್ಲಿ ನೆಲೆ ನಿಂತವರು. ನಗರ ಜೀವನದ ವೈಯಕ್ತಿಕ ಹಾಗೂ ವ್ಯಾವಹಾರಿಕ ಬದುಕನ್ನು, ಔಪಚಾರಿಕವಾದಂತಹ ಸಂಬಂಧಗಳನ್ನು, ಅನುಕೂಲ ಸಿಂಧು ಪ್ರವೃತ್ತಿಯನ್ನು, ಅಗತ್ಯತೆಯ ಆಧಾರದ ಮೇಲೆ ರೂಪುಗೊಂಡ ಹೊಂದಾಣಿಕೆಗಳನ್ನು ಮತ್ತು ಸದಾ ಜಾಗೃತವಾಗಿರುವ ಸಾಮಾಜಿಕ ಪ್ರಜ್ಞೆಯನ್ನು ಹತ್ತಿರದಿಂದ ಕಂಡವರು. ಹಾಗಾಗಿ ಈ ಎರಡೂ ಜೀವನಶೈಲಿಗಳ ಪರಿಚಯ ಅವರಿಗಿದೆ ಮತ್ತು ಅವರ ಕಥೆಗಳಲ್ಲಿ ಅವುಗಳು ತಮ್ಮ ಅಸ್ತಿತ್ವಗಳನ್ನು ಉಳಿಸಿಕೊಂಡಿವೆ. ಇದೇ ಅವರ ಕಥೆಗಳ ವೈಶಿಷ್ಟ್ಯತೆ.

ಈ ಕಥಾ ಸಂಕಲನದಲ್ಲಿ ಅಂತರಂಗ–ಬಹಿರಂಗಗಳ ಸಮನ್ವಯ, ಶುದ್ಧಿ, ತಾಯಿ–ತಂದೆಯರ ಪ್ರೀತಿ, ಗುರುಶಿಷ್ಯನ ಬಾಂಧವ್ಯ, ಆಷಾಢಭೂತಿತನದ ವಿಡಂಬನೆ, ಆತ್ಮವಿಶ್ವಾಸ ಮೂಡಿಸುವ–ವೃದ್ಧಿಸುವ ಪ್ರಸಂಗಗಳು, ವ್ಯಕ್ತಿತ್ವ ವಿಕಸನ, ನಕಾರಾತ್ಮಕ ಭಾವನೆಗಳ ತಿರಸ್ಕಾರ, ಸಕಾರಾತ್ಮಕ ಭಾವನೆಗಳ ಪುರಸ್ಕಾರ, ಪ್ರಾಮಾಣಿಕತೆ, ಸೋದರತ್ವ, ಒಳಿತಿಗಾಗಿ ಪರಿವರ್ತನೆ ಮುಂತಾದ ಬದುಕಿನ ಮೌಲ್ಯಗಳನ್ನು ಸದರಿ ಕಥೆಗಳು ಪ್ರತಿಪಾದಿಸುತ್ತವೆ. ಕಥೆಗಳು ಜೀವನದ ಮಾರ್ಗದರ್ಶಕ ಸೂತ್ರಗಳ ಕೆಲಸವನ್ನೂ ಮಾಡುತ್ತವೆ. ಕಥೆಗಳ ವಿಷಯಗಳಲ್ಲಿ ವೈವಿಧ್ಯತೆಯಿದೆ.

ಕಥೆಗಳ ಭಾಷೆ ಸರಳವಾಗಿದೆ ಹಾಗೂ ರಸಾತ್ಮಕವಾಗಿದೆ. ನಿರೂಪಣೆ ನೇರ ಹಾಗೂ ಸುಲಭಗ್ರಾಹ್ಯ. ಕಥೆಗಳು ಸುಲಲಿತವಾಗಿ ಓದಿಸಿಕೊಂಡು ಹೋಗುತ್ತವೆ. ಪ್ರಸಂಗಗಳು ಅನುಭವದ ಮಾತುಗಳಾಗಿರುವುದರಿಂದ ಥಟ್ಟನೆ ಮನಸ್ಸಿಗೆ ತಾಗುತ್ತವೆ. ಮಾನ್ಯ ಶೇಖರ್‌ರವರು ತಮ್ಮ ಅನುಭವಗಳನ್ನು ಕಥೆಗಳನ್ನಾಗಿಸುವುದರ ಮೂಲಕ ಒಬ್ಬ ಉದಯೋನ್ಮುಖ ಕಥೆಗಾರರಾಗಿ ಹೊರಹೊಮ್ಮಿದ್ದಾರೆ. ಶ್ರೀಯುತರು ಕಥೆ ಕಟ್ಟುವ ಪರಿಯನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದರೆ, ಕಥೆಯ ತಂತ್ರಗಾರಿಕೆಯನ್ನು ಸರಿಯಾಗಿ ತಿಳಿದುಕೊಂಡರೆ, ಕಥೆಯ ಕೃಷಿಯನ್ನು ಮುಂದುವರೆಸಿದರೆ, ಅವರೊಬ್ಬ ಉತ್ತಮ ಕಥೆಗಾರರಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.



ಶ್ರೀ ಗೋಪಿನಾಥ್ ಎಸ್.ಎನ್.
ಮಾಜಿ ಅಧ್ಯಕ್ಷರು – ಎನ್‌ಐಪಿಎಂ ಕರ್ನಾಟಕ ಚಾಪ್ಟರ್

ಓದುವಾಗ ನನ್ನ ಮನಸ್ಸಿಗೆ ಮುದ ನೀಡಿದ ಶಿಷ್ಯ ಶೇಖರ್‌ರವರ "ಬದುಕು ಬದಲಾಯಿಸಿದ ಕಥನಗಳು" ಎಂಬ ಹೊತ್ತಿಗೆಯನ್ನು ಕಥಾಸಂಕಲನ ಎನ್ನಬೇಕೋ, ವೈಚಾರಿಕ ಲೇಖನಗಳ ಪುಸ್ತಕ ಎನ್ನಬೇಕೋ ನನಗಂತೂ ಗೊತ್ತಾಗಲಿಲ್ಲ!

ನಮ್ಮ ಜೀವನದ ದಿಕ್ಕನ್ನೇ ಬದಲಾಯಿಸುವ, ನಮ್ಮ ವಿಚಾರಧಾರೆಗೆ ಸರಿಯಾದ ಸ್ವರೂಪ ಕೊಡುವ, ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ, ಇಂದಿನ ಯುವ ಪೀಳಿಗೆಯಲ್ಲಿ ಕಾಣುತ್ತಿರುವ ನೈತಿಕ ಮೌಲ್ಯಗಳ ಅಧಃಪತನದ ಬಗ್ಗೆ ಕಾಳಜಿ ತೋರಿಸುವ ಜೀವನದ ವಿವಿಧ ಸಮಸ್ಯೆಗಳ ಒಳಹೊಕ್ಕು ನೋಡುವ ಯುವ ಬರಹಗಾರನೊಬ್ಬನ ಪ್ರಾಮಾಣಿಕ ಪ್ರಯತ್ನ ಇಲ್ಲಿದೆ.

ತಮ್ಮ ಬದುಕಿನಲ್ಲಿ ನಡೆದ ಘಟನೆಗಳ ಅನುಭವದ ಕಥೆಗಳ ಹಿನ್ನೆಲೆಯಲ್ಲಿ ಹಲವು ಹತ್ತು ವಿಷಯಗಳ ಬಗ್ಗೆ ನಮ್ಮನ್ನು ಚಿಂತನೆಗೆ ಹಚ್ಚುವ ಪ್ರಾಮಾಣಿಕ ಪ್ರಯತ್ನವೇ ಈ ಸಂಕಲನ.

ಭಾಷಾಭಿಮಾನ ಮತ್ತು ಭಾವನಾತ್ಮಕ ಸಂಬಂಧ ಆಗಿರಬಹುದು, ಸರಿ ಯಾವುದು, ತಪ್ಪಾವುದು ಎಂದು ನಮ್ಮ ಮನಸ್ಸಿನ ಒಳಗನ್ನಡಿಯನ್ನು ತೆರೆದು ನೋಡಿ ವಿಶ್ಲೇಷಿಸುವ ಪ್ರಯತ್ನ ಇರಬಹುದು, ಸ್ವಂತಿಕೆಯನ್ನು ಬೆಳೆಸಿಕೊಳ್ಳುವ ಪ್ರಯತ್ನ ಇರಬಹುದು, ಸಕಾರಾತ್ಮಕ ಮನೋಭಾವ ಮತ್ತು ದೃಢವಾದ ಆತ್ಮವಿಶ್ವಾಸ ನಮ್ಮ ಬಾಳಿಗೆ ಭದ್ರಬುನಾದಿಯನ್ನು ಹಾಕುವ ಬಗ್ಗೆ ಇರಬಹುದು, ಕಲಿಯುವಿಕೆ ಒಂದು ನಿರಂತರವಾದ ಪ್ರಯತ್ನ ಎಂಬ ಸಂದೇಶವನ್ನು ಕೊಡುವುದಿರಬಹುದು, ಪರಿಸರದ ಬಗ್ಗೆ ಕಾಳಜಿ ತೋರಿಸುವುದಿರಬಹುದು, ಬೇರೆಯವರ ದೃಷ್ಟಿಯಿಂದ

ಸಮಸ್ಯೆಯನ್ನು ನೋಡುವ ಪ್ರಾಮಾಣಿಕ ಪ್ರಯತ್ನ ಮಾಡುವುದಿರಬಹುದು, ಮಾನವೀಯ ಮೌಲ್ಯಗಳನ್ನು ಅನುಷ್ಠಾನಕ್ಕೆ ತರುವುದಿರಬಹುದು, ಸಾಮಾನ್ಯರಲ್ಲಿ ಅಸಾಮಾನ್ಯರಾಗುವ ಪ್ರಯತ್ನ ಇರಬಹುದು, ಛಲ ಬಿಡದ ತ್ರಿವಿಕ್ರಮನಂತೆ ನಮ್ಮ ಪ್ರಯತ್ನಗಳನ್ನು ನಿರಂತರವಾಗಿ ಮಾಡುತ್ತಾ ಯಶಸ್ಸಿನ ಗುರಿ ತಲುಪುವುದಿರಬಹುದು, ಅಪ್ಪ – ಅಮ್ಮನ ಭಾವನೆಗಳಿಗೆ ಸ್ಪಂದಿಸಿ ಅವರನ್ನು ಸರಿಯಾಗಿ ನೋಡಿಕೊಳ್ಳುವುದಿರಬಹುದು, ಇತರರ ಭಾವನೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಸಂವೇದನಾಶೀಲತೆಯನ್ನು ಬೆಳೆಸಿಕೊಳ್ಳುವ ಬಗ್ಗೆ ಇರಬಹುದು, ಇತರರಿಗೆ UNCONDITIONAL LOVE ಕೊಡುವುದಿರಬಹುದು....., ಈ ರೀತಿಯ ಹಲವು ಹತ್ತು ಸಂದೇಶಗಳನ್ನು ತುಂಬಾ ಅರ್ಥಗರ್ಭಿತವಾಗಿ ತಮ್ಮ ಜೀವನದ ನೈಜ ಘಟನೆಗಳೊಂದಿಗೆ ಓದುಗರ ಜೊತೆ ಹಂಚಿಕೊಳ್ಳುವುದರಲ್ಲಿ, ಅವರನ್ನು ಚಿಂತನೆಗೆ ತೊಡಗಿಸುವುದರಲ್ಲಿ, ಈ ಯುವ ಲೇಖಕ ಯಶಸ್ವಿಯಾಗಿದ್ದಾರೆ ಎಂದರೆ ತಪ್ಪಾಗಲಾರದು.

ಈ ಲೇಖಕರಲ್ಲಿ ಸಮಾಜದ ಸಮಸ್ಯೆಗಳಿಗೆ ತುಡಿತ ಮತ್ತು ಪ್ರತಿಸ್ಪಂದನೆ ಇದೆ. ನಾವು ಸಮಾಜದಿಂದ ಪಡೆದಿದ್ದಕ್ಕಿಂತ ಹೆಚ್ಚಿನದ್ದನ್ನು ವಾಪಸ್ಸು ಕೊಡಬೇಕು ಎಂಬ ಸಂದೇಶವನ್ನು ಓದುಗರಿಗೆ ತಲುಪಿಸುವ ಉತ್ಸಾಹ – ಕಾಳಜಿ ಎರಡೂ ಇವೆ.

ಇವರಲ್ಲಿ ಒಳ್ಳೆಯ ಚಿಂತನಶೀಲ ಬರಹಗಾರನಾಗುವ ಎಲ್ಲಾ ಲಕ್ಷಣಗಳಿವೆ. ಅವರಿಂದ ಇನ್ನೂ ಒಳ್ಳೆಯ ಸಾಹಿತ್ಯ ಕೃಷಿ ಬರಲಿ, ಅವರ ಲೇಖನಿ ಇನ್ನೂ ಹರಿತವಾಗಲಿ ಎಂಬುದು ನನ್ನ ಹೃದಯಪೂರ್ವಕ ಹಾರೈಕೆ.

ಡಾ. ಜಿ.ಪಿ. ನಾಯಕ್
ನಿರ್ದೇಶಕರು – ಟ್ಯಾಲೆಂಟ್ ಅವಿನ್ಯೂಸ್

ಶ್ರೀ ಶೇಖರ್ ರವರು ಬರೆದಿರುವ 'ಬದುಕು ಬದಲಾಯಿಸಿದ ಕಥನಗಳು' ಕೃತಿಯನ್ನು ಓದಿದೆ. ತನ್ನ ನಿಜ ಜೀವನದಲ್ಲಿ ಕಂಡ ಘಟನಾವಳಿಗಳನ್ನು ಪುಸ್ತಕ ರೂಪದಲ್ಲಿ ಬರೆಯುವಾಗ ಶೇಖರ್‌ರವರು ವಾಸ್ತವಿಕ ಸ್ಥಿತಿಗತಿಗಳನ್ನು ಸರಳವಾಗಿ ವಿವರಿಸಿ, ಈ ಕೃತಿಗೆ ಜೀವ ತುಂಬಿದ್ದಾರೆ.

ಸದ್ಯಕ್ಕೆ ಬೆಂಗಳೂರಿನ ಪ್ರತಿಷ್ಠಿತ ಕಂಪನಿಯ ಉನ್ನತ ಹುದ್ದೆಯಲ್ಲಿರುವ ಇವರು, ತನ್ನ ಜನ್ಮದಾತರು, ತಾನು ಹುಟ್ಟಿದ ಕುಗ್ರಾಮ ಮತ್ತು ಬೆಳೆದು ಬಂದ ಪರಿಸರದ ಪರಿಚಯವನ್ನು ಮುಗ್ಧ ಪ್ರಾಮಾಣಿಕತೆಯಿಂದ ಮಾಡಿ, ಬದುಕನ್ನು ಬಿಚ್ಚಿಟ್ಟಿದ್ದಾರೆ.

ನಿಜ–ಸುಳ್ಳುಗಳನ್ನು ಬೆರೆಸಿ ಆಕರ್ಷಕ ಜೀವನ ಚರಿತ್ರೆಯನ್ನು ಬರೆಯುವ ಈ ಯುಗದಲ್ಲಿ, ಶೇಖರ್‌ರವರು ನಿಜದ ಕೊಡಲಿ ಹಿಡಿದು "ನೋಡಿ ಸ್ವಾಮಿ ನಾವಿರೋದು ಹೀಗೆ" ಎಂದಿದ್ದಾರೆ. ಅವರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಬರಹದ ಜಾಡು ಹಿಡಿದಿರುವುದು ಶ್ಲಾಘನೀಯ. ಅವರ ಈ ಬರಹದಾದಿಗೆ 'ಬದುಕು ಬದಲಾಯಿಸಿದ ಕಥನಗಳು' ನಾಂದಿಯಾಗಲಿ.

ಶ್ರೀ ವಿಠ್ಠಲರಾವ್ ಕೆ.
ಮಾಜಿ ಕಾರ್ಯದರ್ಶಿ – ಎನ್ಐಪಿಎಂ ಕರ್ನಾಟಕ ಚಾಪ್ಟರ್
ಮತ್ತು ಐ.ಆರ್. ಕನ್ಸಲ್ಟೆಂಟ್

ವಿಶ್ವಾಸ, ನಂಬಿಕೆ, ಮಾನವೀಯತೆ, ಮೌಲ್ಯಗಳು, ನಿಸ್ವಾರ್ಥತೆ ಮತ್ತು ಸಂಬಂಧಗಳು ನಶಿಸಿ ಹೋಗುತ್ತಿರುವ ಈಗಿನ ವಾಸ್ತವ ಸಮಾಜದಲ್ಲಿ ಶೇಖರ್ ರವರ "ಬದುಕು ಬದಲಾಯಿಸಿದ ಕಥನಗಳು" ಕೃತಿಯಲ್ಲಿನ ಕಥೆಗಳು ಇವುಗಳ ಮಹತ್ವವನ್ನು ಪರಿಚಯಿಸುತ್ತಾ, ವ್ಯಕ್ತಿತ್ವದ ಮೇಲೆ ಗಾಢವಾದ ಪ್ರಭಾವವನ್ನು ಬೀರಬಲ್ಲ ಶಕ್ತಿಯನ್ನು ಹೊಂದಿವೆ.

ಇಲ್ಲಿನ ಕಥೆಗಳು ನಮ್ಮವೇ ಎನ್ನುವ ಮಟ್ಟಿಗೆ ಹತ್ತಿರವಾಗುತ್ತಾ, ನಮ್ಮನ್ನು ಸೆಳೆಯುತ್ತಾ ಅದ್ಬುತವಾದ ಅನುಭವವನ್ನು ನೀಡುವುದು ಖಚಿತ.

ಈ ಪುಸ್ತಕ ಯುವಜನತೆಯ ವ್ಯಕ್ತಿತ್ವ ವಿಕಸನಕ್ಕೆ ಉತ್ತಮವಾದ ತಳಹದಿಯನ್ನು ನೀಡುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುವುದರ ಮೂಲಕ ಒಂದೊಳ್ಳೆಯ ಮಾರ್ಗಸೂಚಿಯಾಗಬಲ್ಲದು.

ಶ್ರೀ ನಾಗಭೂಷಣ್
ಉಪ ಪ್ರಧಾನ ವ್ಯವಸ್ಥಾಪಕರು – ಮಾನವ ಸಂಪನ್ಮೂಲ,
ಎಸ್‌ಇಜಿ ಆಟೋಮೋಟಿವ್ ಇಂಡಿಯಾ ಪ್ರೈವೇಟ್ ಲಿಮಿಟೆಡ್.

"ಬೆಲೆಯಿಂದಕ್ಕುಮೆ ಕೃತಿ ಗಾವುಲ ಭುವನದ ಭಾಗ್ಯದಿಂದಕ್ಕುಂ" ಎಂಬುದು ಕವಿ ವಾಣಿಯಾದರೆ, "ಒಬ್ಬ ಒಳ್ಳೆಯ ಸ್ನೇಹಿತ ನೂರು ರಕ್ತ ಸಂಬಂಧಿಗಳಿಗೆ ಸಮ, ಅಂತೆಯೇ, ಒಂದು ಒಳ್ಳೆಯ ಪುಸ್ತಕ ನೂರು ಆತ್ಮೀಯ ಸ್ನೇಹಿತರಿಗೆ ಸಮಾನ" ಎಂಬುದು ನಾಣ್ಣುಡಿ. ಶ್ರೀಯುತ ಶ್ರೀ ಶೇಖರ್‌ರವರ ಬದುಕು ಬದಲಾಯಿಸಿದ ಕಥನಗಳು ಎಂಬ ಈ ಚೊಚ್ಚಲ ಕೃತಿ ಮೇಲಿನ ಮಾತುಗಳಿಗೆ ಹೊರತಾಗಿಲ್ಲ. ಇಲ್ಲಿನ ಕೃತಿಯ ವಸ್ತು, ವ್ಯಕ್ತಿ, ವ್ಯಕ್ತಿತ್ವ ಹಾಗೂ ಇವುಗಳು ಸಕಾರಾತ್ಮಕವಾಗಿ ಶ್ರೀಯುತರ ಬದುಕಿನ ಮೇಲೆ ಬೀರಿದ ಪ್ರಭಾವ ಖಂಡಿತ ಪ್ರಶಂಸನೀಯ.

ಹೆತ್ತು ಹೊತ್ತವರನ್ನು ಮರೆಯುವ ಈ ಸಂಕೀರ್ಣ ಸಂಕ್ರಮಣ ಕಾಲದಲ್ಲಿ, ತಾನು ನಡೆದು ಬಂದ ದಾರಿಯನ್ನು ಒಮ್ಮೆ, ಮತ್ತೊಮ್ಮೆ ತಿರು ತಿರುಗಿ ನೋಡುವುದಷ್ಟೇ ಅಲ್ಲದೆ ತನ್ನ ಎಲ್ಲಾ ಪಯಣದ ಹೆಜ್ಜೆ ಗುರುತುಗಳನ್ನು ಒಂದೆಡೆ ಕಲೆಹಾಕಿ ಕೃತಿಯಾಗಿ ರೂಪಿಸುವ ಇವರ ಈ ಕನಸು ಅದ್ಭುತವೇ ಸರಿಯಷ್ಟೇ. ಅಲ್ಲದೆ ಇವರ ವ್ಯಕ್ತಿತ್ವಕ್ಕೆ ಹಿಡಿದ ದರ್ಪಣವೂ ಹೌದು. ಹೀಗೆ ಈ ಕೃತಿಯನ್ನು ರೂಪಿಸಿ, ತಿದ್ದಿ ತೀಡಿ ಕನ್ನಡದ ಓದುಗರಿಗೆಲ್ಲಾ ಉಣಬಡಿಸಲು ಮುಂದಾದ ಶ್ರೀಯುತ ಶ್ರೀ ಶೇಖರ್ ರವರ ಕೈಂಕರ್ಯ ನಿಜಕ್ಕೂ ಅವಿಸ್ಮರಣೀಯ.

ಶ್ರೀ ಡಿ.ಆರ್. ನಾಗರಾಜ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ – ಎನ್.ಎಂ.ಎಸ್.
ಹೆಚ್.ಆರ್. ಸಲ್ಯೂಷನ್ಸ್ ಮತ್ತು ಮಾಜಿ ರಾಷ್ಟ್ರೀಯ ಅಧ್ಯಕ್ಷರು – ಎನ್ಐಪಿಎಂ

ಕನ್ನಡ ಪ್ರೇಮಿ ಮತ್ತು ಮಾನವ ಸಂಪನ್ಮೂಲ ಅಧಿಕಾರಿಯಾದ ಶಿಷ್ಯ ಶೇಖರ್‌ನ 'ಬದುಕು ಬದಲಾಯಿಸಿದ ಕಥನಗಳು' ಪುಸ್ತಕದ ಉದ್ದೇಶ ಗಮನಾರ್ಹವಾಗಿದೆ.

ತಮ್ಮ ಜೀವನದಲ್ಲಿ ಸಂಭವಿಸಿದ ಮತ್ತು ನೋಡಿದ ಸಣ್ಣ–ಸಣ್ಣ ಘಟನೆಗಳನ್ನು ಆಯ್ದುಕೊಂಡು, ಅವುಗಳನ್ನು ವ್ಯಕ್ತಿತ್ವ ವಿಕಸನದ ದೃಷ್ಟಿಕೋನದಲ್ಲಿ ಪ್ರಸ್ತುತಪಡಿಸಿರುವುದು ಹೆಮ್ಮೆಯ ವಿಚಾರ. ಪ್ರತಿಯೊಂದು ಕಥೆಯಲ್ಲಿಯೂ ಜೀವನಕ್ಕೆ ಮುಖ್ಯವಾಗಿ ಬೇಕಾಗಿರುವ ವಿಷಯಗಳನ್ನು ಅರ್ಥಪೂರ್ಣವಾಗಿ ತಿಳಿಸುತ್ತಾ, ಓದುಗನನ್ನು ಚಿಂತನೆಗೆ ಒಳಪಡಿಸುವಂತೆ ಶೇಖರ್ ಇಲ್ಲಿ ಮಾಡಿದ್ದಾನೆ.

ಒಟ್ಟಾರೆಯಾಗಿ, "ನೋಡುವ ದೃಷ್ಟಿ ಬದಲಾದರೆ, ಇಡೀ ಸಮಾಜ ನಾವು ಬಯಸುವಂತೆ ನಮಗೆ ಸಹಕಾರಿಯಾಗಿ ನಿಲ್ಲುತ್ತದೆ" ಎಂಬ ಸಂದೇಶವನ್ನು ಶೇಖರ್‌ನ ಈ ಕಥನಗಳು ತಿಳಿಸುತ್ತವೆ. ಅವನಿಂದ ಇನ್ನೂ ಹೆಚ್ಚಿನ ಬರವಣಿಗೆಗಳು ಬರಲೆಂದು ನನ್ನ ಶುಭ ಹಾರೈಕೆ.

ಶ್ರೀ ಅಶೋಕ್ ಪ್ರಭು
ಪ್ರಧಾನ ವ್ಯವಸ್ಥಾಪಕರು – ಉತ್ಪಾದನೆಗಳು
ಲಿಂಕನ್ ಹೆಲಿಯೋಸ್ ಇಂಡಿಯಾ ಲಿ.,

ಶೇಖರ್‌ನ 'ಬದುಕು ಬದಲಾಯಿಸಿದ ಕಥನಗಳು' ಪುಸ್ತಕವನ್ನು ಓದಿ ಮುಗಿಸಿದಾಗ ಆಹ್ಲಾದಕರ ಭಾವನೆ ಮೂಡಿದ್ದು ಅಚ್ಚರಿಯಲ್ಲ. ಇದು ಇವನ ಮೊದಲ ಪುಸ್ತಕವೆಂದರೆ ನಂಬಲು ಅಸಾಧ್ಯವಾಗುವ ಮಟ್ಟಿಗೆ ಕಥನಗಳನ್ನು ನಿರೂಪಿಸಿರುವ ಪರಿ ಅದ್ಭುತ. ಪ್ರತಿಂ151ೊಂದು ಕಥೆಯು ಓದುಗನನ್ನು ತನ್ನತ್ತ ಸೆಳೆಯುವ ಮತ್ತು ಮತ್ತೆ – ಮತ್ತೆ ಓದುವಂತೆ ಪ್ರೇರೇಪಿಸುವ ಮಾಂತ್ರಿಕತೆಯನ್ನು ಹೊಂದಿವೆ.

ಇಲ್ಲಿನ ಘಟನೆಗಳ ಅವಲೋಕನಗಳು, ನಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತಾ ಓದುಗರಿಗೆ ಮಾರ್ಗದರ್ಶಿಯಾಗಬಲ್ಲವು. ವ್ಯಕ್ತಿತ್ವ ಪರಿಪಕ್ವತೆಗೆ ಬೇಕಾಗಿರುವ ಗುರುಗಳು, ನಂಬಿಕೆ, ಆತ್ಮವಿಶ್ವಾಸ, ನಮ್ಮತನ, ನಕಾರಾತ್ಮಕತೆಯ ಪ್ರಭಾವ, ಸಕಾರಾತ್ಮಕತೆಯ ಪ್ರತಿಫಲ, ಸರಿಯಾದ ಗುರಿಯ ಅವಶ್ಯಕತೆ, ಸ್ವಾಭಿಮಾನ, ಮೌಲ್ಯಗಳು, ಹಿರಿಯರಿಗೆ ಗೌರವ ಹಾಗೂ ನಮ್ಮ ಸುತ್ತಮುತ್ತಲಿನ ವ್ಯಕ್ತಿತ್ವಗಳಲ್ಲಿನ ಒಳ್ಳೆಯ ವಿಚಾರಗಳನ್ನು ಗುರುತಿಸುವ ಮನೋಭಾವದ ವಿಚಾರಗಳನ್ನು ಶೇಖರ್ ತುಂಬಾ ಸರಳವಾಗಿ ಚಿಕ್ಕವರಿಗೂ ಅರ್ಥವಾಗುವಂತಹ ಭಾಷೆಯ ಬಳಕೆಯಲ್ಲಿ ವ್ಯಕ್ತಪಡಿಸಿರುವುದು ಓದುಗರಿಗೆ ರುಚಿಸುವುದು ಖಚಿತ.

ಆಧುನಿಕ ಗುಂಗಿನಲ್ಲಿ ನಮ್ಮ ಸಂಸ್ಕೃತಿ ಮತ್ತು ರೀತಿ–ನೀತಿಗಳು ಮರೆಯಾಗುತ್ತಿರುವ ಸಮಯದಲ್ಲಿ, ಈ ತರಹದ ಪುಸ್ತಕಗಳ ಅವಶ್ಯಕತೆ ಇದೆ. ಈ ಪುಸ್ತಕ ಓದುಗರ ಜೀವನಕ್ಕೆ ಮತ್ತಷ್ಟು ಬೆಳಕು ತರಲೆಂದು ಆಶಿಸುತ್ತಾ, ಶೇಖರ್‌ಗೆ ಶುಭ ಹಾರೈಸುತ್ತೇನೆ.

ಈ ಪುಸ್ತಕದ ಆಯ್ದ ಕೆಲವೇ ಕೆಲವು ಪುಟಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಸಂಪೂರ್ಣ ಪುಸ್ತಕಕ್ಕಾಗಿ ಸಂಪರ್ಕಿಸಿ:

NIRUTA Publications

ನಿರುತ ಪಬ್ಲಿಕೇಷನ್ಸ್

#326, 2ನೇ ಮಹಡಿ, ಕೆನರಾ ಬ್ಯಾಂಕ್ ಎದುರು,
ಡಾ. ಅಂಬೇಡ್ಕರ್ ಕಾಲೇಜು ಹತ್ತಿರ, ಕೆಂಗುಂಟೆ, ಮಲ್ಲತ್ತಹಳ್ಳಿ,
ಬೆಂಗಳೂರು-560056. ದೂ: 080-23213710, 8073067542

ಇಮೇಲ್: nirutapublications@gmail.com

www.nirutapublications.org

"ಅಸಾಮಾನ್ಯರಿಂದ ಅಸಾಮಾನ್ಯತೆಯನ್ನು
ಸಾಧಿಸುವ ವ್ಯಕ್ತಿಗಿಂತ;
ಸಾಮಾನ್ಯರಿಂದ ಅಸಾಮಾನ್ಯತೆಯನ್ನು
ಸಾಧಿಸುವ ವ್ಯಕ್ತಿ ನಾವಾಗಬೇಕು."

- ನಾವೇಕೆ ನಮ್ಮ ಒಳಗಿನ ಮತ್ತು ಹೊರಗಿನ ವ್ಯಕ್ತಿಗಳನ್ನು ಗುರುತಿಸಬೇಕು?
- ನಂಬಿಕೆಯಿಲ್ಲದೇ ನಾವು ಮಾಡಿದ ಕಾರ್ಯಗಳು ಯಾವುವು?
- ನಮ್ಮ ಜೀವನ ನಮ್ಮ ಆಯ್ಕೆಯಾದರೆ, ಸಮಾಜದ ಪಾತ್ರವೇನು?
- ನಾವು ದೇವರಾದರೆ ಎಂತಹ ವರವನ್ನು ನಮ್ಮ ಮಕ್ಕಳಿಗೆ ನೀಡಬಯಸುತ್ತೇವೆ?
- ನಾವೇಕೆ ಇತರರ ದೃಷ್ಟಿಕೋನಕ್ಕಿಂತ, ನಮ್ಮ ದೃಷ್ಟಿಕೋನವೇ ಸರ್ವಶ್ರೇಷ್ಠವೆಂದು ತೀರ್ಮಾನಿಸುತ್ತೇವೆ?
- ಇತರರು ಕಲಿಯುವುದಾದರೆ, ಸಾಧಿಸುವುದಾದರೆ ನಾವೇಕೆ ಮಾಡಲಾಗುವುದಿಲ್ಲ?
- ನಮಗೇಕೆ ಉಚಿತ ಊಟ ಸಿಗುವುದಿಲ್ಲ?
- ನಾವು ನಮ್ಮ ಮೌಲ್ಯಗಳು ಇತರರ ಮೌಲ್ಯಗಳಿಗಿಂತ ಶ್ರೀಮಂತವಾಗುವಷ್ಟು ಶ್ರಮಿಸಬಲ್ಲೆವಾ?
- ಅಂತಃಕರಣದಿಂದ ನಾವೆಷ್ಟು ಪ್ರಾಮಾಣಿಕರು?

ಈ ರೀತಿಯ ಹಲವಾರು ಪ್ರಶ್ನೆಗಳಿಗೆ ಉತ್ತರವೇ ಈ "ಬದುಕು ಬದಲಾಯಿಸಿದ ಕಥನಗಳು."

Ph: 080-23213710
Mob: +91 9980066890
www.nirutapublications.org
www.niratanka.org

Price: Rs.160/-